ಬೆಲೆ ರೂ.2.50
Date of posting - 15th of every month at BPC Udupi.

# ಶ್ರೀ ಶಾರದಾ

ಮಾಸಪತ್ರಿಕೆ – 15 ಜೂನ್ 2024

॥ ಧಿಯೋ ಯೋನಃ ಪ್ರಚೋದಯಾತ್ ॥

25
ಶ್ರೀ ಶಾರದಾ ಪತ್ರಿಕೆಗೆ ರಜತ ಸಂಭ್ರಮ

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 0820-2958444, 8971185844
ಸಂಪುಟ-25 ಸಂಚಿಕೆ-6 ಪುಟಗಳು-8 Registered Under No.UDP/1260/2024-2026

## ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು, ಉಡುಪಿಯಲ್ಲಿ "ಶ್ರೀ ಶಂಕರ ಜಯಂತಿ" ಆಚರಣೆ





ತಾ.12.05.2024 ರಂದು ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು, ಉಡುಪಿಯಲ್ಲಿ ಶ್ರೀ ಶಂಕರ ಜಯಂತಿ ಆಚರಣೆಯು ನೆರವೇರಿತು. ಪೂರ್ವಾಹ್ನ 9 ಗಂಟೆಗೆ ಶ್ರೀ ಶಾರದಾ ದೇವಸ್ಥಾನದಲ್ಲಿ ಪುರೋಹಿತರಾದ ಶ್ರೀಪಾದ ಭಟ್ ಮತ್ತು ಧರಣೇಶ್ ಭಟ್‌ರವರು ಸಂಘದ ಅಧ್ಯಕ್ಷರಾದ ಮಂಜುನಾಥ ಹೆಬ್ಬಾರ್ ಶ್ರೀ ದೇವಿಗೆ ಮತ್ತು ಶ್ರೀ ಶಂಕರಾಚಾರ್ಯರಿಗೆ ಪ್ರಾರ್ಥನೆಯನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಸಂಘದ ಪದಾಧಿಕಾರಿಗಳು ಹಾಗೂ ಡಾ। ಸಿ. ರಮೇಶ್ ರಾವ್ ಉಪಸ್ಥಿತರಿದ್ದರು.

ಶ್ರೀ ಶಾರದಾ ಮಂಟಪದಲ್ಲಿ ಶ್ರೀ ಶಂಕರಾಚಾರ್ಯರ ಅಷ್ಟಕಗಳು, ದಶಕಗಳು, ಸ್ತೋತ್ರ ಹಾಗೂ ಸ್ತವಗಳನ್ನು ಕಲಿಸುವ ಕಮ್ಮಟದೊಂದಿಗೆ ಬಹಳ ವಿಭಿನ್ನ ರೀತಿಯಲ್ಲಿ ಆಚರಿಸಲಾಯಿತು. ಈ ಕಮ್ಮಟವನ್ನು ಡಾ। ವಿದ್ಯಾ ಸುದರ್ಶನ ರಾವ್ ನಡೆಸಿಕೊಟ್ಟರು.

ಕಮ್ಮಟದಲ್ಲಿ ಶ್ರೀ ಶಾರದಾ ಭಜನಾ ಮಂಡಳಿ ಉಡುಪಿಯ 35 ಸದಸ್ಯರು, ಶ್ರೀ ಶಿವರಂಜನಿ ಕಲಾಕೇಂದ್ರ, ಪೊಳಲಿ ಬೊಕ್ಕಸದ 10 ಸದಸ್ಯರು, ಶ್ರೀ ಜ್ಞಾನಶಕ್ತಿ ಭಜನಾ ಬಳಗ ಬಾರ್ಕೂರಿನ 7 ಸದಸ್ಯರು, ಶ್ರೀ ರಾಮ ಮಾತೃ ಭಜನಾ ಮಂಡಳಿ, ಕುಂದಾಪುರದ 11 ಸದಸ್ಯರು. ತರಂಗಿಣಿ ಭಜನಾ ಮಂಡಳಿ ದೊಡ್ಡಣಗುಡ್ಡೆಯ 3 ಸದಸ್ಯರು. ಸ್ನೇಹ ಸಂಗಮ ಭಜನಾ ಮಂಡಳಿ ಶಿವಪಾಡಿಯ 20 ಸದಸ್ಯರು, ಶಿವಾನಿ ವಿಪ್ರ ಮಹಿಳಾ ಭಜನಾ ಮಂಡಳಿ ಸೂರಾಲು ವಲಯದಿಂದ 6 ಸದಸ್ಯರು, ಹೀಗೆ ಒಟ್ಟು ಸುಮಾರು 92 ಸದಸ್ಯರು ತಂಡಗಳೊಂದಿಗೆ ಪಾಲ್ಗೊಂಡರು.

ಮಧ್ಯಾಹ್ನ ಮಹಾಪೂಜೆ ಹಾಗೂ ಭೋಜನಾ ನಂತರ ಶ್ರೀ ಶಂಕರಾಚಾರ್ಯರ ಕುರಿತು ಉಪನ್ಯಾಸ ಕಾರ್ಯಕ್ರಮ ನೆರವೇರಿತು. ಶ್ರೀಮತಿ ಇಂದಿರಾ ದಿವಾಕರ್ ಅವರು ಶ್ರೀ ಶಂಕರಾಚಾರ್ಯರ ಜೀವನಚರಿತ್ರೆಯ ಬಗ್ಗೆ ಉಪನ್ಯಾಸ ನೀಡಿದರು. ಸಭೆಯಲ್ಲಿ ಸಂಘದ ಅಧ್ಯಕ್ಷರಾದ ಮಂಜುನಾಥ ಹೆಬ್ಬಾರ್, ಉಪಾಧ್ಯಕ್ಷರಾದ ಯು. ಅರವಿಂದ ಕುಮಾರ್, ಶ್ರೀಮತಿ ಪೂರ್ಣಿಮಾ ಪಿ ರಾವ್, ಮಹಿಳಾ ವೇದಿಕೆಯ ಅಧ್ಯಕ್ಷರಾದ ಡಾ। ವಿಜಯ ವೈ.ಬಿ. ಹಾಗೂ ಸಂಘದ ಕಾರ್ಯದರ್ಶಿ ಪ್ರಭಾಕರ ಭಂಡಿ ಉಪಸ್ಥಿತರಿದ್ದರು. ಬೆಳಿಗ್ಗೆ ಕಮ್ಮಟದಲ್ಲಿ ಕಲಿತ ಶ್ರೀ ಶಂಕರಾಚಾರ್ಯ ವಿರಚಿತ ಅಷ್ಟಕ, ದಶಕ ಹಾಗೂ ಕಲ್ಯಾಣವೃಷ್ಟಿ ಅಭಿಯಾನ ನಡೆಯಿತು. ಮಂಗಳದೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

### ಶ್ರೀ ಶೃಂಗೇರಿ ಶಂಕರ ಮಠ, ಉಡುಪಿ ಶಾಖೆ ಇದರ ನಿವೇಶನಕ್ಕೆ ಧನಸಹಾಯ ನೀಡಿದವರು

| | | |
|---|---|---|
| 119. | ಡಾ। ಪಿ. ಗೋಪಾಲಕೃಷ್ಣ ರಾವ್, ಮಾರ್ಪಳ್ಳಿ, ಉಡುಪಿ | 1,00,000/– |
| 120. | ಶ್ರೀ ಗಣೇಶ ರಾವ್ ಕೆ. ಆರ್., ಕುಕ್ಕಿಕಟ್ಟೆ | 50,000/– |
| 121. | ಡಾ। ಕೃಷ್ಣಪ್ರಸಾದ ಪೆರುವಾಜೆ, ಮಣಿಪಾಲ | 25000/– |
| 122. | ಶ್ರೀ ರಾಜೇಶ ರಾವ್, ಚಿಟ್ಪಾಡಿ | 15000/– |
| 123. | ಶ್ರೀ ಕೃಷ್ಣಮೂರ್ತಿ ರಾವ್ ಬಿ., ಅಂಬಲಪಾಡಿ | 25000/– |
| 124. | ಶ್ರೀ ಸುರೇಶ ಶಾನುಭಾಗ್ ಇಂದ್ರಾಳಿ | 25000/– |
| 125. | ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ | 25000/– |
| 126. | ಶ್ರೀಮತಿ ನಾಗವೇಣಿ, ಚಿಟ್ಪಾಡಿ | 1,00,000/– |
| 127. | ಶ್ರೀಮತಿ ಸರೋಜಾ ರಾವ್ ಬಿ., ಗೋಳಿಕಟ್ಟೆ, ಹೆರ್ಗ | 25000/– |
| 128. | ಶ್ರೀ ಶ್ರೀಕಾಂತ ರಾವ್, ರಕ್ಷಾನಿಧಿ, ಮೂಡು ಅಲೆವೂರು | 7500/– |
| 129. | ಶ್ರೀಮತಿ ರುಕ್ಮಿಣಿ ಸ್ಮರಣಾರ್ಥ ಶ್ರೀಮತಿ ಗೀತಾ ಸುಬ್ಬರಾವ್ ಕುಕ್ಕಿಕಟ್ಟೆ | 10999/– |
| 130. | ಶ್ರೀಮತಿ ಪದ್ಮಾವತಿ ಗಣೇಶ್, ಹೆರ್ಗ | 5000/– |
| 131. | ಶ್ರೀ ಪ್ರಕಾಶ ರಾವ್ ಕೆ., ಮಣಿಪಾಲ | 5000/– |

(ಮುಂದುವರಿಯುವುದು....)

**ಸಮಾಜ ಬಾಂಧವರ ಉದಾರ ಧನಸಹಾಯವನ್ನು ನಿರೀಕ್ಷಿಸುತ್ತೇವೆ.**

*'Dharmadhikari, Sri Sringeri Shankara Matha, Udupi Branch' ಈ ಹೆಸರಿನಲ್ಲಿ SB A/c no 0182500101876001, IFSC code - KARB 00 00 018 ಕರ್ನಾಟಕ ಬ್ಯಾಂಕ್, ಅಂಬಾಗಿಲು ಇಲ್ಲಿಗೆ ಸಲ್ಲುವಂತೆ ಚೆಕ್ / ಡಿಡಿ / ನೆಫ್ಟ್ ಇತ್ಯಾದಿಗಳನ್ನು ಕಳಿಸಬೇಕಾಗಿ ಪ್ರಾರ್ಥನೆ.

*80 ಜಿ ನಿಯಮದಂತೆ ತೆರಿಗೆ ವಿನಾಯಿತಿ ಬೇಕಿದ್ದವರು 'Sri Sringeri Sharada Peetham Charitable Trust, Sringeri' ಈ ಹೆಸರಲ್ಲಿ ಚೆಕ್/ಡಿಡಿ ಇತ್ಯಾದಿಗಳನ್ನು ನನಗೆ ಕಳಿಸಬೇಕಾಗಿ ವಿನಂತಿ. PAN ಸಂಖ್ಯೆ ಹಾಗೂ ವಿಳಾಸ ಬೇಕು.

**ವಾಗೀಶ ಎಸ್. ಶಾಸ್ತ್ರೀ**, ಧರ್ಮಾಧಿಕಾರಿ, ಉಡುಪಿ (9449591513)

## ಶ್ರೀ ಶಾರದಾ ಮಾಸ ಪತ್ರಿಕೆಗೆ 25ರ ಹರ್ಷದಾಯಕ ಸನ್ನಿವೇಶ

ಈ ಸಂಭ್ರಮೋಲ್ಲಾಸ, ಉತ್ಸಾಹ, ಸಡಗರದ ಸಮಯದಲ್ಲಿ ಒಂದು ವಿಶೇಷ ಸಂಚಿಕೆ ಹೊರಡಿಸಿದರೆ ಅರ್ಥಪೂರ್ಣವೆನಿಸುತ್ತದೆ ಎಂದು ನನ್ನ ಭಾವನೆ. ಹಲವಾರು ಪತ್ರಿಕೆಗಳು ಹುಟ್ಟುತ್ತವೆ, ಹುಟ್ಟಿದ ವೇಗದಲ್ಲಿ ಸಾಯುತ್ತವೆ. ನಾಯಿಕೊಡೆಗಳಂತೆ ಹುಟ್ಟುವ ಪತ್ರಿಕೆಗಳ ಪಾಡು ನಾಯಿ ಪಾಡಾಗುತ್ತಿದೆ. ಆದರೆ ಶ್ರೀ ಶಾರದಾ ಮಾಸಪತ್ರಿಕೆ ಹಾಗಲ್ಲ ನಮ್ಮ ಸಮಾಜದ ಪ್ರತಿಯೊಬ್ಬರನ್ನು ತಲುಪಿ ಶಿಕ್ಷಣ, ಕಲೆ, ಸಮಾಜ ಸೇವೆ, ಉದ್ಯೋಗ, ವ್ಯವಹಾರ, ಕ್ರೀಡೆ, ಧಾರ್ಮಿಕ ಚಟುವಟಿಕೆ, ಇತ್ಯಾದಿ ಎಲ್ಲಾ ವಿಷಯಗಳನ್ನು ಭಾವಚಿತ್ರ ಸಹಿತ ಪ್ರಕಟಿಸುತಾ ಬಂದಿರುವುದು ಶ್ರೀ ಶಾರದಾ ಪತ್ರಿಕೆಯ ಗರಿಮೆಯಾಗಿರುತ್ತದೆ. ಈ ಪತ್ರಿಕೆ–ಪತ್ರಿಕಾರಂಗೆದಲ್ಲಿ ನೂರು ಕಾಲ ಬಾಳಿ ಬೆಳಗಿ–ಅಜರಾಮರವಾಗಿ ರಾರಾಜಿಸಿ ನಮ್ಮ ಸಮಾಜದ ಧ್ವನಿಯಾಗಿ ಸ್ಪಂದಿಸಿ ಚಿರಂತನವಾಗಿ ಬಾಳಿ ಬೆಳಗಿ ಪರಸ್ಪರ ಸಾಹೋದರ್ಯದ, ಸಾಹಚರ್ಯದ ಸಮುತ್ಸುಕತೆಯ ಸಮಭಾವನೆ, ಉತ್ಸುಕತೆಯ ಉತ್ಸವದಿಂದ ಕೆಲಸ ಮಾಡಲಿ ಎಂದು ಹಾರೈಸುತ್ತೇನೆ.

**–ಡಾ। ಅಡೂರು ಸಂತೋಷ್ ರಾವ್, ಶುಭ ಕ್ಲಿನಿಕ್, ಬೇಲೂರು, ಹಾಸನ ಜಿಲ್ಲೆ**

## ಶ್ರೀ ಶಾರದಾ ಮಂಟಪದಲ್ಲಿ ರುದ್ರ ಪಾರಾಯಣ




ಶ್ರೀ ಶಾರದಾ ಮಂಟಪದ ಯಾಗಶಾಲೆಯಲ್ಲಿ ಕುಂಜಿಬೆಟ್ಟು ಪರಿಸರದ ಬ್ರಾಹ್ಮಣರಿಂದ ತಾ.05.06.2024ರಿಂದ ಪ್ರತಿ ದಿನ ಸಂಜೆ 5.30 ರಿಂದ 7.30ರವರೆಗೆ ಒಟ್ಟು 11 ದಿನ ರುದ್ರ ಪಾರಾಯಣ ನಡೆಯುತ್ತಿದೆ. ಉದ್ಘಾಟನೆಯು ಶೃಂಗೇರಿ ಮಠದ ಧರ್ಮಾಧಿಕಾರಿ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳಿಂದ ನಡೆಯಿತು. ಸಂಘದ ಅಧ್ಯಕ್ಷರಾದ ಮಂಜುನಾಥ್ ಹೆಬ್ಬಾರ್ ಉಪಸ್ಥಿತರಿದ್ದರು.

## ಉಡುಪಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)ದ ಉಪಾಧ್ಯಕ್ಷ ಬಿ. ಜಯರಾಮರಾವ್ ನಿಧನ



ಬಿ. ಜಯರಾಮರಾವ್ ಅವರು 70ನೇ ವಯಸ್ಸಿನಲ್ಲಿ ತಾ.15.05.2024ರಂದು ನಿಧನರಾದರು. ಅವರು ಸಿಂಡಿಕೇಟ್ ಬ್ಯಾಂಕ್‌ನಲ್ಲಿ ನಿವೃತ್ತ ಉದ್ಯೋಗಿಯಾಗಿದ್ದು, ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿಯಲ್ಲಿ ಉಪಾಧ್ಯಕ್ಷರಾಗಿದ್ದು, ಪಾದೆಬೆಟ್ಟು ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಮೊಕ್ತೇಸರರಾಗಿ, ಉಡುಪಿ ಶ್ರೀ ಶಾರದಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯಲ್ಲಿ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದರು. ಅವರು ವೀಣಾ ಜಯರಾಮ್ ಮತ್ತು ಪುತ್ರ ಸೌರಭ್‌ನನ್ನು ಅಗಲಿದ್ದಾರೆ.



ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161 97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ – 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

## ಸಮಾಜ ಬಾಂಧವರ ಗಮನಕ್ಕೆ

ಶ್ರೀ ಶಾರದಾ ಪತ್ರಿಕೆಯು ಪ್ರತಿ ತಿಂಗಳು ನಮ್ಮ ಸಮಾಜದ ಸುಮಾರು 1600 ಚಂದಾದಾರರ ಮನೆಗಳಿಗೆ ತಲುಪುತ್ತಿದೆ. ಯಾವುದೇ ಚಂದಾದಾರರಾಗಿದ್ದ ನಮ್ಮ ಸಮಾಜ ಬಾಂಧವರಿಗೆ ಪತ್ರಿಕೆಯು ಬರುತ್ತಿಲ್ಲವಾದಲ್ಲಿ ಕೂಡಲೇ ಈ ಕೆಳಗಿನವರಿಗೆ ತಿಳಿಸಿದಲ್ಲಿ ಸೂಕ್ತ ವ್ಯವಸ್ಥೆ ಮಾಡಲಾಗುವುದು.

ಪಿ. ಪ್ರಭಾಕರ ಭಂಡಿ (94492 54846), ಕಾರ್ಯದರ್ಶಿ
ವಿನೋದ್ ಕುಮಾರ್ (99648 96319), ಜೊತೆ ಕಾರ್ಯದರ್ಶಿ

## ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ.) ಮಂಗಳೂರು

### ಸಮಾಜ ಬಾಂಧವರ ಗಮನಕ್ಕೆ

ನಮ್ಮ ಸ್ಥಾನಿಕ ಸಮಾಜದ ಅಗತ್ಯವುಳ್ಳ ಕುಟುಂಬಗಳ ವೈದ್ಯಕೀಯ ತಪಾಸಣೆ ಹಾಗೂ ನೆರವಿನ ಬಗ್ಗೆ ನಾವು ಮಣಿಪಾಲ ಆರೋಗ್ಯಕಾರ್ಡ್ ಜೊತೆಗೂಡಿ ಬಿಡುಗಡೆ ಮಾಡಲು ಮಹಾಮಂಡಲದ ಕಾರ್ಯಕಾರಿ ಸಮಿತಿಯಲ್ಲಿ ನಿರ್ಧರಿಸಲಾಗಿದೆ. ಸ್ಥಾನಿಕ ಸಂಘಗಳ ಮೂಲಕ ಮಾಹಿತಿಯನ್ನು ಪಡೆದು ದಾಖಲೆ ನೀಡಬೇಕಾಗಿ ವಿನಂತಿ.

## ಅಖಂಡ ಸೌಂದರ್ಯಲಹರಿ ಪಾರಾಯಣ

ಶ್ರೀ ಶಾರದಾ ಭಜನಾ ಮಂಡಳಿ ಉಡುಪಿಯುವರಿಂದ 13.05.2024ರಂದು ಅಖಂಡ ಸೌಂದರ್ಯಲಹರಿ ಪಾರಾಯಣ ನಡೆಯಿತು. ಬಳಿಕ ಶ್ರೀ ಶಾರದಾ ದೇವಿ ಮತ್ತು ಶ್ರೀ ಶಂಕರ ಭಾಗವತ್ಪಾದರ ಭಾವಚಿತ್ರದೊಂದಿಗೆ ಕುಂಜಿಬೆಟ್ಟು ಪರಿಸರದಲ್ಲಿ ಒಂದು ಸುತ್ತು ಮೆರವಣಿಗೆ ಭಜನೆ, ಕುಣಿತದೊಂದಿಗೆ ನಡೆಯಿತು.

**ಸಂಪಾದಕ ಮಂಡಳಿ**

ಶ್ರೀ ಯು. ಅರವಿಂದ ಕುಮಾರ್
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಮಧುಸೂಧನ ರಾವ್ ಕುಂಜಾರುಗಿರಿ
ಡಾ। ಶ್ರೀಮತಿ ವಿಜಯ ರಾವ್ ವೈ.ಬಿ.

★★★★ ★★★★

ಸಲಹೆಗಾರರು :
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ
ಶ್ರೀ ಕೆ. ವೇಣುಗೋಪಾಲರಾವ್, ಅಂಬಲಪಾಡಿ



ಶ್ರೀ ಶಂಕರ ಜಯಂತಿ ಪ್ರಯುಕ್ತ ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು, ಉಡುಪಿಯಲ್ಲಿ ತಾ.12.05.2024ರಲ್ಲಿ ನಡೆದ ಭಜನಾ ಕಮ್ಮಟದಲ್ಲಿ ಭಾಗವಹಿಸಿದ ನಮ್ಮ ಸಮಾಜದ ಮಹಿಳೆಯರು.

## ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಮಾಜ ಸೇವಾ ಸಂಘ ಸುಳ್ಯ ಶ್ರೀ ಶಂಕರ ಜಯಂತಿ



ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಮಾಜ ಸೇವಾ ಸಂಘ ಸುಳ್ಯ ಇದರ ವತಿಯಿಂದ ತಾ.12.05.2024 ಆದಿತ್ಯವಾರ ಶ್ರೀ ಚೆನ್ನಕೇಶವ ದೇವಾಲಯದ ಸಭಾಭವನದಲ್ಲಿ ಶ್ರೀ ಶಂಕರ ಜಯಂತಿ ಕಾರ್ಯಕ್ರಮ ನಡೆಯಿತು. ಸದಾನಂದ ಶಾಸ್ತ್ರಿಗಳ ಮಾರ್ಗದರ್ಶನದಂತೆ ಸಂಘದ ಅಧ್ಯಕ್ಷರಾದ ರೆಂಜಾಳ ಕುಮಾರಸ್ವಾಮಿ ದಂಪತಿಗಳು ಶಂಕರಾಚಾರ್ಯ ಕಲ್ಪೋಕ್ತ ಪೂಜೆಗೆ ಸಂಕಲ್ಪ ಮಾಡಿ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಸಂಘದ ಪದಾಧಿಕಾರಿಗಳು ಹಾಗೂ ಸಮಾಜ ಬಾಂಧವರು ಉಪಸ್ಥಿತರಿದ್ದರು. ಸಮಾಜ ಬಾಂಧವರಿಂದ ರುದ್ರಪಠಣ, ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಪಠಣ ನಡೆಯಿತು. ಕಾರ್ಯಕ್ರಮದ ಅಂಗವಾಗಿ ರಂಗೋಲಿ ಸ್ಪರ್ಧೆ, ಭಗವದ್ಗೀತೆ ಕಂಠಪಾಠ ಸ್ಪರ್ಧೆ ಕಿರಿಯರಿಗೆ, ಪುರುಷರಿಗೆ ಮತ್ತು ಮಹಿಳೆಯರಿಗೆ ಏರ್ಪಡಿಸಲಾಗಿತ್ತು. ನಮ್ಮ ಸಮಾಜದ ಸುಬ್ರಹ್ಮಣ್ಯ ಭಜನಾ ಮಂಡಳಿ ಸದಸ್ಯರಿಂದ ಭಜನಾ ಕಾರ್ಯಕ್ರಮ ನಡೆಯಿತು. ಸಭಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಎನ್.ಕೆ. ಜಗನ್ನಿವಾಸ ರಾವ್ ಪುತ್ತೂರು, ಬೆಂಗಳೂರಿನಲ್ಲಿ ಎಂಜಿನಿಯರ್ ಆಗಿರುವ ಅಕಿರೇಕಾಡು ಶರತ್ ರಾವ್ ಮತ್ತು ಬಯಂಬು ರಾಜೇಶ್ ರಾವ್ ಅಜ್ಜಾವರ ಮತ್ತು ಶ್ರೀ ಚೆನ್ನಕೇಶವ ದೇವಾಲಯದ ಆನುವಂಶಿಕ ಆಡಳಿತ ಮೊಕ್ತೇಸರರಾದ ಹರಿಪ್ರಸಾದ್ ತುದಿಯಡ್ಕ ಉಪಸ್ಥಿತರಿದ್ದರು. ಸಮಾಜದ ಹಿರಿಯ ಪುರೋಹಿತರಾದ ಸುಬ್ರಾಯ ಭಟ್ ಅಡೂರು, ಹಪ್ಪಳ ಉದ್ಯಮ ಮತ್ತು ಉಬರಡ್ಕ ಹಾಲು ಉತ್ಪಾದಕ ಸಂಘದ ಅಧ್ಯಕ್ಷರಾಗಿ ಸಾಧನೆ ಗೈದ ಶ್ರೀಮತಿ ಸುಜಾತ ಬಿ. ರಾವ್ ಉಬರಡ್ಕ ಇವರನ್ನು ಸನ್ಮಾನಿಸಲಾಯಿತು. ನಮ್ಮ ಸಮಾಜದ ಪಿಯುಸಿ ಮತ್ತು ಎಸ್.ಎಸ್.ಎಲ್.ಸಿ.ಯಲ್ಲಿ ಡಿಸ್ಟಿಂಕ್ಷನ್ ಪಡೆದ ವಿದ್ಯಾರ್ಥಿಗಳನ್ನು "ಹೆಮ್ಮೆಯ ಪ್ರತಿಭೆ" ಫಲಕ ನೀಡಿ ಗೌರವಿಸಲಾಯಿತು. ರಾಜೇಶ್ ರಾವ್ ಅಜ್ಜಾವರ ಶ್ರೀ ಶಂಕರ ಭಗವತ್ಪಾದರ ಜೀವನ ಚರಿತ್ರೆ ಹಾಗೂ ಸಮಾಜಕ್ಕೆ ನೀಡಿದ ಕೊಡುಗೆ ಬಗ್ಗೆ ಉತ್ತಮ ಉಪನ್ಯಾಸವನ್ನು ನೀಡಿದರು. ಕೃಷ್ಣ ರಾವ್ ನಾವೂರು ಸ್ವಾಗತಿಸಿ, ಪ್ರಾಸ್ತಾವಿಕ ಭಾಷಣ ಮಾಡಿದ ಸತೀಶ್ ರಾವ್ ದಾಸರ ಬೈಲ್ ಮತ್ತು ಮಹಿಳಾ ಸಮಿತಿ ಅಧ್ಯಕ್ಷರಾದ ಡಾ। ವೀಣಾ ಧನ್ಯವಾದ ಸಮರ್ಪಣೆ ನೆರವೇರಿಸಿದರು.

## ಕೊಲ್ಲಿಯಲ್ಲಿ ಚಂಡಿಕಾ ಹವನ



ಕೊಲ್ಲಿ ದೇವಸ್ಥಾನದಲ್ಲಿ 30–04–2024 ರಂದು ಬೆಳಿಗ್ಗೆ ಚಂಡಿಕಾ ಹವನವು ವೇದಮೂರ್ತಿ ಶ್ರೀ ವಾಗೀಶ ಶಾಸ್ತ್ರಿಗಳು ಹಾಗೂ ತಂಡದ ಪೌರೋಹಿತ್ಯದಲ್ಲಿ ನಡೆಯಿತು.

## ಬ್ರಹ್ಮಕಲಶೋತ್ಸವ ದಿನಾಚರಣೆ ಮತ್ತು ಶ್ರೀ ಶಂಕರಭಗವತ್ಪಾದಾಚಾರ್ಯ ಜಯಂತಿ





ತಾ.12.05.2024 ಆದಿತ್ಯವಾರ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಪಡುಬಿದ್ರಿ ಮತ್ತು ಆಡಳಿತ ಮಂಡಳಿ, ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಪಾದೆಬೆಟ್ಟು ಇವರ ಸಹಯೋಗದಲ್ಲಿ ದೇವರ ಬ್ರಹ್ಮಕಲಶೋತ್ಸವ ದಿನಾಚರಣೆ ಮತ್ತು ಶ್ರೀ ಶಂಕರಭಗವತ್ಪಾದಾಚಾರ್ಯ ಜಯಂತಿ ಮಹೋತ್ಸವವನ್ನು ಕ್ಷೇತ್ರದ ತಂತ್ರಿವರೇಣ್ಯರಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರೀಯವರ ಮಾರ್ಗದರ್ಶನದಂತೆ ನಡೆಯಿತು. ಶ್ರೀ ದೇವರಿಗೆ ಪವಮಾನ ಕಲಶಾಭಿಷೇಕ, ಶ್ರೀ ಶಂಕರಾಚಾರ್ಯರಿಗೆ ಕಲ್ಪೋಕ್ತ ಪೂಜೆ ಹಾಗೂ ಸಂಘದ ಸದಸ್ಯರಿಂದ ಅಷ್ಟೋತ್ತರ ಪಾರಾಯಣ, ಭಜನಾ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ವಗ್ಗ ಕಾವಳಕಟ್ಟೆ ಪ್ರತಾಪ್ ರಾವ್ ಅವರು ಶಂಕರಾಚಾರ್ಯರ ಬಗ್ಗೆ ಉಪನ್ಯಾಸ ಮಾಡಿದರು. ಇವರಿಗೆ ವಿದ್ವತ್ ಸನ್ಮಾನ ಮಾಡಿ ಗೌರವಿಸಲಾಯಿತು. ನಂತರ ಅನ್ನಸಂತರ್ಪಣೆಯು ನಡೆಯಿತು.

## ಪರ್ಜನ್ಯ ಕೆ. ರಾವ್ ಪ್ರಥಮ ಸ್ಥಾನ



ಉಡುಪಿ ಜಿಲ್ಲಾ ಯುವ ಬ್ರಾಹ್ಮಣ ಪರಿಷತ್ – ಇವರು ತಾ.12.05.2024ರಂದು ಗುಂಡಿಬೈಲು ಬ್ರಾಹ್ಮೀ ಸಭಾಭವನದಲ್ಲಿ ಏರ್ಪಡಿಸಿದ ಉಡುಪಿ ಜಿಲ್ಲಾ ಮಟ್ಟದ ಭಕ್ತಿಗೀತೆ ಸ್ಪರ್ಧೆಯಲ್ಲಿ (10 ರಿಂದ 15 ವರ್ಷ) ಪರ್ಜನ್ಯ ಕೆ. ರಾವ್ ಪ್ರಥಮ ಸ್ಥಾನ ಪಡೆದಿದ್ದಾರೆ.

PRODUCTS ARE AVAILABLE AT ATTRACTIVE DISCOUNT PRICES




BATTERY PLANET
SALES & SERVICES
Dealers : Inverter, Batteries, Gas Geysers & Solar Water Heaters
Udupi, Padubidri, Contact : 94824 57926, 99455 43051
* Inverter+battery rates starts from Rs. 11,990

ಪ್ರೊ : ನಯನಾಭಿರಾಮ ಸ್ವಾಮಿ
ಮೊಬೈಲ್ : 9449101303, 9632500864

**ಉದಯಾದ್ರಿ ಕೆಟರರ್ಸ್**

ಉಮಾಮಹೇಶ್ವರ ಉದಯಾದ್ರಿ ಮಠ,
ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ಹತ್ತಿರ,
"ಅಂಗೀರಸ", ಪಡುಬಿದ್ರಿ, ಉಡುಪಿ ಜಿಲ್ಲೆ.

ಮದುವೆ ಇನ್ನಿತರ ಸಮಾರಂಭಗಳಿಗೆ ಶುಚಿರುಚಿಯಾದ ಅಡುಗೆ ಮಾಡಿಕೊಡಲಾಗುವುದು.
ಶ್ರಾದ್ಧ ಮತ್ತು ಔರ್ಧ್ವದೈಹಿಕ ಕ್ರಿಯೆಗಳನ್ನು ಅಲ್ಲದೇ ಇತರ ವೈದಿಕ ಕಾರ್ಯಕ್ರಮಗಳನ್ನು ಕೂಡಾ ನಡೆಸಿಕೊಡಲಾಗುವುದು.
ಸಮಾಜಬಾಂಧವರು ಸದುಪಯೋಗ ಪಡಿಸಿಕೊಳ್ಳಬಹುದು.

ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

## ಜಗದ್ಗುರುಗಳಿಂದ ಚಂದ್ರಮೌಳೀಶ್ವರ ಪೂಜೆ



ತಾ.29–04–2024 ರಂದು ರಾತ್ರಿ ಗಂಟೆ 8–30 ಕ್ಕೆ ಶ್ರೀ ಮದ್ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಯವರು ನಮ್ಮ ಬೆಳ್ಳಂಗಡಿ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾದ ಸಭಾಭವನಕ್ಕೆ ಚಿತ್ತೈಸಿ ಆಶೀರ್ವಚನವಿತ್ತರು. ತದನಂತರ ತಮ್ಮ ಪಟ್ಟದ ದೇವರಾದ ಶ್ರೀ ಚಂದ್ರಮೌಳೀಶ್ವರ ದೇವರ ಪೂಜೆಯನ್ನು ನೆರವೇರಿಸಿ ಭಕ್ತರಿಗೆಲ್ಲಾ ಫಲಮಂತ್ರಾಕ್ಷತೆಯನ್ನು ನೀಡಿದರು.

ಜಗದ್ಗುರುಗಳು ಆಗಮಿಸುತ್ತಿದ್ದಂತೆ ಸಭಾದ ಅಧ್ಯಕ್ಷರಾದ ಶಿವಾನಂದ ರಾವ್‌ರವರು ಪೂರ್ಣಕುಂಭ ಸ್ವಾಗತವನ್ನು ಕೋರಿದರು. ಪೂರ್ವಾಧ್ಯಕ್ಷರಾದ ಪಿ. ರಾಧಾಕೃಷ್ಣ ರಾವ್‌ರವರು ತುಳಸಿ ಮಾಲೆಯನ್ನು ಅರ್ಪಿಸಿದರು. ಕಾರ್ಯದರ್ಶಿ ವಿಕಾಸ್ ರಾವ್ ದಂಪತಿಗಳು ಧೂಳೀಪಾದಪೂಜೆಯನ್ನು ನೆರವೇರಿಸಿದರು. ಸುಮಂಗಲಿಯರಾದ ಶ್ರೀಮತಿ ರಾಜಶ್ರೀ ಮತ್ತು ಶ್ರೀಮತಿ ಸ್ವಾತಿ ಯವರು ಆರತಿ ಮಾಡಿ ಸಭಾಭವನದ ಒಳಗೆ ಬರಮಾಡಿಕೊಂಡರು.

ಬಿ.ಕೆ.ಧನಂಜಯ ರಾವ್ ಪ್ರಸ್ತಾವನೆಯೊಂದಿಗೆ ಜಗದ್ಗುರುಗಳಿಗೆ, ಕಾರ್ಯನಿರ್ವಹಣಾಧಿಕಾರಿ ಮುರಳಿ ಪಿ.ಎ. ರವರಿಗೆ, ಶೃಂಗೇರಿ ಧರ್ಮಾಧಿಕಾರಿಗಳಾದ ಬೊಳ್ಳಾವ ಸತ್ಯಶಂಕರ ಮತ್ತು ವೇದಮೂರ್ತಿ ವಾಗೀಶ ಶಾಸ್ತ್ರಿಯವರಿಗೆ, ನೆರೆದ ಭಕ್ತ ಸಮುದಾಯಕ್ಕೆ ಸ್ವಾಗತ ಕೋರಿದರು.

ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ಎಲ್ಲರೂ ಧರ್ಮವನ್ನು ಪಾಲಿಸಬೇಕು ಹಾಗೂ ತಮ್ಮ ಮಕ್ಕಳಿಗೂ ಆಚರಣೆಗಳನ್ನು ಕೈಬಿಡದಂತೆ ತಿಳಿಸಬೇಕೆಂದರು.

ಸಮುದಾಯದಲ್ಲಿರುವ ಜನರ ಬಗ್ಗೆ ತಿಳಿಸುತ್ತಾ, ಹಿಂದೆ ಭರ್ತೃಹರಿ ಎಂಬ ವಿದ್ವಾಂಸ ತನ್ನ ಅನುಭವ, ತಿಳುವಳಿಕೆಯಿಂದ ಮಾನವರು ಯಾವರೀತಿ ಬಾಳಬೇಕೆಂಬ ಬಗ್ಗೆ ನೀತಿ ಶತಕವನ್ನು ರಚಿಸಿ ಅದನ್ನು ಸಮಾಜಕ್ಕೆ ತಿಳಿಸಿದ ಉದಾಹರಣೆಯನ್ನು ಕೊಟ್ಟರು.

ಜಗದ್ಗುರುಗಳು ಮುಂದುವರಿಸುತ್ತಾ ಆಗಿನ ಕಾಲದಲ್ಲಿ ಮೂರು ವಿಧದ ಮನುಷ್ಯರ ಬಗ್ಗೆ ಬರೆದಿದ್ದಾರೆ.ಈಗ ಬರೆಯುತ್ತಿದ್ದರೆ ನಾಲ್ಕು ಬಗೆಯ ಮನುಷ್ಯರ ಬಗ್ಗೆಯೂ ಬರೆಯುತ್ತಿದ್ದರು. ಅವರಾರೆಂದರೆ ಯಾವುದನ್ನೂ ಸರಿಯಾಗಿ ತಿಳಿದುಕೊಳ್ಳದೆ, ಅರ್ಥೈಸಿಕೊಳ್ಳಲಾರದೆ ತನಗೆ ವೇದ್ಯವಾದ ರೀತಿಯಲ್ಲಿ ಪ್ರಚಾರಪಡಿಸಿ ಸಮಾಜದ ಸ್ವಾಸ್ಥ್ಯವನ್ನು ಹಾಳುಗೆಡಹುವವರು.

ಸಾಧ್ಯವಾದರೆ ಒಳ್ಳೆಯದನ್ನು ಮಾಡೋಣ. ಸಾಧ್ಯವಾಗದಿದ್ದರೆ ಸುಮ್ಮನೆಯಿದ್ದು ಸಮಾಜಕ್ಕೆ , ಯಾ ವೈಯಕ್ತಿಕ ಹಾನಿಯಾಗದಂತೆ ಮಾಡೋಣ ಎಂದರು.

ಮಂತ್ರಾಕ್ಷತೆ ನೀಡಿದ ನಂತರ ಜಗದ್ಗುರುಗಳು ವಾಸ್ತವ್ಯಕ್ಕೆ ಕಿಲ್ಲೂರಿನ ಸಂತೋಷ್ ಕುಮಾರ್‌ರವರ ಮನೆಗೆ ತೆರಳಿದರು.

## ವಿಜೃಂಭಣೆಯ ವಜ್ರಮಹೋತ್ಸವ



ತಾ.19.05.2024ರಂದು ಉಡುಪಿ ಜಿಲ್ಲೆ ಕಾರ್ಕಳದ ಮನೋಹರ ರಾಯರ ಮನೆ ವಾಸುಕಿಯಲ್ಲಿ ಸಂಭ್ರಮದ ವಾತಾವರಣ. ಸಾವಿತ್ರಿ ಮನೋಹರರ ಜನ್ಮ ದಿನದ ವಜ್ರಮಹೋತ್ಸವದ ವಿಜೃಂಭಣೆ ಬೆಳಗ್ಗೆ ಪುರೋಹಿತರಾದ ಶ್ರೀ ಸತೀಶ ಭಟ್ಟರ ನೇತೃತ್ವದಲ್ಲಿ ಹೋಮ ಹವನಾದಿಗಳೊಂದಿಗೆ ಆರಂಭವಾದ ಕಾರ್ಯಕ್ರಮವನ್ನು ಮಗಳು ಸ್ವಾತಿ ಶರ್ಮ ಮತ್ತು ಮಗ ಕಮಾಂಡರ್ ಅಶ್ವಿನ್ ಎಂ. ರಾವ್ ಹಮ್ಮಿಕೊಂಡಿದ್ದರು. ಬಂಧು ಬಾಂಧವರಿಂದ ಕಿಕ್ಕಿರಿದ ಮನೆಯ ಅಂಗಳ ನೂರಾರು ಆಮಂತ್ರಿತ ಶುಭ ಹಾರೈಕೆಗೆ ಸಾಕ್ಷಿಯಾಯಿತು.

ಸಾವಿತ್ರಿಯವರ ತವರು ಮನೆಯವರ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಆಮಂತ್ರಿತರಿಂದ ಪ್ರಶಂಸೆಗೆ ಪಾತ್ರವಾಯಿತು. ವಿಶೇಷ ಅತಿಥಿಗಳಾಗಿ ಬೆಂಗಳೂರಿನಿಂದ ಆಗಮಿಸಿದ ಭಾರತ್ ಸ್ಕೌಟ್ ಗೈಡ್ ಸಂಘಟನಾ ಆಯುಕ್ತ ಶ್ರೀ ಪ್ರಭಾಕರ ಭಟ್ ಮತ್ತು ಉಡುಪಿ ಜಿಲ್ಲಾ ಗೈಡ್ ಆಯುಕ್ತೆ ಶ್ರೀಮತಿ ಜ್ಯೋತಿ ಪೈ ಕಾರ್ಯಕ್ರಮ ಕಂಡು ಮೂಕವಿಸ್ಮಿತರಾದರು. ಶ್ರೀಮತಿ ಸಾವಿತ್ರಿಗೆ ಕಿರೀಟ ತೊಡಿಸಿದರೆ ಮನೋಹರ ರಾಯರಿಗೆ ಪೇಟ ತೊಡಿಸಿ, ಹಾರ ಬದಲಾಯಿಸಿ ಮನೆಯವರು ಸಂಭ್ರಮಿಸಿದರು.

ಇತ್ತೀಚೆಗೆ ತಮ್ಮ ಸಾಮಾಜಿಕ ಸೇವೆಗಾಗಿ ಮಾನವ ಅಭಿವೃದ್ಧಿ ಇಲಾಖೆ ಮೂಲಕ ಅಮೇರಿಕಾ ವಿಶ್ವ ವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ ಪಡೆದ ಹೆಮ್ಮೆಯ ಸಹೋದರ ಹಂದಿಗೋಡು ರಾಮಚಂದ್ರಯ್ಯನವರನ್ನು ಶ್ರೀಮತಿ ಸಾವಿತ್ರಿ ದಂಪತಿಗಳು ಸನ್ಮಾನಿಸಿದರು.

ವಜ್ರಮಹೋತ್ಸವ ಅಂಗವಾಗಿ 20 ಜನ ಸುಮಂಗಲಿಯರಿಗೆ ಸೀರೆ ಬಾಗೀನ ಇತ್ತು ಗೌರವಿಸಲಾಯಿತು. ಪೂಜಾ ಕಾರ್ಯಕ್ರಮಗಳ ನಂತರ ಪುರೋಹಿತರಾದ ಶ್ರೀ ಸತೀಶ್ ಭಟ್ ಮತ್ತು ಪಾಕಶಾಸ್ತ್ರ ಪ್ರವೀಣ ನಾಗಭೂಷಣ ಹೆಬ್ಬಾರರನ್ನು ಮನೋಹರ ದಂಪತಿಗಳು ಸನ್ಮಾನಿಸಿದರು. ಮಧ್ಯಾಹ್ನ ಭೋಜನದ ಬಳಿಕ ಕಾರ್ಕಳ ಸಂಘದ ವತಿಯಿಂದ ಶ್ರೀ ಶಂಕರ ಜಯಂತಿ ಕಾರ್ಯಕ್ರಮವು ಜರಗಿತು.

## ಮೂಡಬಿದಿರಿಯಲ್ಲಿ ಶಂಕರ ಜಯಂತಿಯ ಆಚರಣೆ





ತಾ.19.05.2024ರಂದು ಶ್ರೀ ಶಂಕರ ಜಯಂತಿಯ ಆಚರಣೆ ವಿಶೇಷವಾಗಿ ಅಲಂಗಾರು ಜಯರಾಮ ರಾವ್ ಅವರ ಅನುಗ್ರಹ ಮನೆಯಲ್ಲಿ ರುದ್ರಾಭಿಷೇಕದೊಂದಿಗೆ ಸಂಪನ್ನಗೊಂಡಿದೆ. ಅಲ್ಲದೆ ಅದೇ ದಿನ ವೈದಿಕ ಶಿಬಿರವು ಸ್ಥಾನಿಕ ಬ್ರಾಹ್ಮಣ ಮಹಾಮಂಡಲ ಹಾಗೂ ಶ್ರೀ ಆದಿಶಂಕರ ಪರಿಷತ್‌ಗಳ ಜಂಟಿ ಆಶ್ರಯದಲ್ಲಿ ವೇದಮೂರ್ತಿ ಕೃಷ್ಣಭಟ್ ಹೆಜಮಾಡಿ ಅವರಿಂದ ಉದ್ಘಾಟನೆಗೊಂಡು 10 ದಿನಗಳ ಪರ್ಯಂತ ಜರಗಿತು.

ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ.: ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

Buying and selling shares as easy as checking your emails
Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's
Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)

## ಮಾರ್ಪಳ್ಳಿ ನಾಗಪ್ಪಯ್ಯ ವಂಶಜರ ಭೋಜನ ಕುಟೀರ ಉದ್ಘಾಟನೆ



ಮಾರ್ಪಳ್ಳಿ ನಾಗಪ್ಪಯ್ಯ ವಂಶಜರ ಧಾರ್ಮಿಕ ಸಮಿತಿಯ ವತಿಯಿಂದ ಸುಮಾರು ನೂರಕ್ಕೂ ಹೆಚ್ಚು ವರುಷಗಳಿಂದ ಪೂಜಿಸಿಕೊಂಡು ಬರುತ್ತಿದ್ದ ದೈವಸ್ಥಾನದ ಜೀರ್ಣೋದ್ಧಾರವು ನಡೆದಿದ್ದು 2023ರಲ್ಲಿ ನಾಗಬ್ರಹ್ಮಸ್ಥಾನವು ಲಕ್ಷ್ಮಿ ಸುಬ್ರಾಯ ವನಕ್ಕೆ ವಿಧ್ಯುಕ್ತವಾಗಿ ಸ್ಥಳಾಂತರಗೊಂಡಿತು. ನಂತರ ಧಾರ್ಮಿಕ ಸಮಿತಿಯು ನಾಗದೈವಗಳ ಪೂಜೆಯನ್ನು ನಡೆಸಿಕೊಂಡು ಬರುತ್ತಿದೆ. ಈ ಸಂದರ್ಭದಲ್ಲಿ ಕುಟುಂಬಸ್ಥರಿಗಾಗುವ ತೊಂದರೆಗಳನ್ನು ಗಮನಿಸಿ ಶಿವಮೊಗ್ಗ, ಬೆಂಗಳೂರಿನಲ್ಲಿರುವ ಮಾರ್ಪಳ್ಳಿ ಸರಸ್ವತಿ ರಾಮರಾಯರ ಮಕ್ಕಳು ಮತ್ತು ಮೊಮ್ಮಕ್ಕಳು ಸೇರಿ ಸುಮಾರು ಹದಿನೈದು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಭೋಜನ ಕುಟೀರವನ್ನು ಕಟ್ಟಿಸಿದ್ದು ಅದರ ಉದ್ಘಾಟನೆಯನ್ನು ಸರಸ್ವತಿ ರಾಮರಾಯರ ಹಿರಿಯ ಮಗ ಎಂ. ಆರ್. ಗೋಪಾಲಕೃಷ್ಣ ರಾವ್ ದಂಪತಿಗಳು ತಾ.19.05.2024 ರಂದು ನಡೆದ ಸಮಾರಂಭದಲ್ಲಿ ನೆರವೇರಿಸಿದರು. ಅದೇ ದಿನ ಸತ್ಯನಾರಾಯಣ ಪೂಜೆ ನಡೆಯಿತು.

ವಾಸ್ತುಹೋಮ ಮೊದಲಾದವುಗಳು ತಾ.18.05.2024ರ ರಾತ್ರಿ ವೇ.ಮೂ. ಬ್ರಹ್ಮಶ್ರೀ ಗುರುಪ್ರಸಾದ್ ಹೆಬ್ಬಾರರ ತಂಡದ ನೇತೃತ್ವದಲ್ಲಿ ನಡೆಯಿತು. ಇದಕ್ಕೆ ಸ್ಥಳವನ್ನು ಉಜಿರೆ ಸಚ್ಚಿದಾನಂದ ರಾಯರು ಮತ್ತು ಅವರ ಸೋದರ ಸೋದರಿಯರು ಹಾಗೂ ಮಕ್ಕಳು (ಉಜಿರೆ ಸುಬ್ರಾಯರ ಮಕ್ಕಳು, ಮೊಮ್ಮಕ್ಕಳು) ಸೇರಿ ಉಚಿತವಾಗಿ ದಾನಕೊಟ್ಟುದುದನ್ನು ಧಾರ್ಮಿಕ ಸಮಿತಿಯು ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತದೆ. ಈ ಭೋಜನಕುಟೀರವು ನಾಗಪ್ಪಯ್ಯ ವಂಶಜರ ಕುಟುಂಬಸ್ಥರ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳಿಗೆ ಉಚಿತವಾಗಿ ದೊರಕಲಿದೆ ಎಂದು ಟ್ರಸ್ಟಿಗಳಾದ ರವಿಪ್ರಕಾಶ ಕಾರ್ಕಳ ಮತ್ತು ಚಿಟ್ಪಾಡಿ ಎಂ. ಸಂತೋಷ್ ರಾವ್ ತಿಳಿಸಿದರು. ಇದೇ ಸಂದರ್ಭದಲ್ಲಿ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಅಧ್ಯಕ್ಷರಾದ ಮಂಜುನಾಥ ಹೆಬ್ಬಾರರನ್ನು ಸನ್ಮಾನಿಸಲಾಯಿತು. ಹಾಗೆಯೇ ವೇ.ಮೂ. ಬ್ರಹ್ಮಶ್ರೀ ಗುರುಪ್ರಸಾದ್ ಹೆಬ್ಬಾರರು ಪುರೋಹಿತ ಸಂಘಟನೆಯ ಮಾಜಿ ಅಧ್ಯಕ್ಷರನ್ನೂ ಸನ್ಮಾನಿಸಲಾಯಿತು. ಸನ್ಮಾನ ಕಾರ್ಯಕ್ರಮವನ್ನು ಎಂ. ಆರ್. ವಾಸುದೇವ, ಎಂ. ಆರ್. ಸದಾಶಿವ ರಾವ್, ಎಂ.ಆರ್. ಚಂದ್ರಶೇಖರ ರಾವ್, ಶಿರ್ತಾಡಿ ಸೂರ್ಯ ನಾರಾಯಣ ರಾವ್, ಪುತ್ತೂರಿನ ಶಾಂತಾರಾಮ ರಾವ್ ಹಾಗೂ ಎಂ. ಸದಾನಂದ ರಾವ್ ಚಿಟ್ಪಾಡಿ ನೆರವೇರಿಸಿದರು. ಶಿರ್ತಾಡಿ ಯೋಗೀಶ್ ರಾವ್ ಮತ್ತು ಉಮೇಶ್ ರಾವ್ ಕೊಡವೂರು ರವರು ಬಂದ ಎಲ್ಲರನ್ನೂ ಹಾರ್ದಿಕವಾಗಿ ವಂದಿಸಿದರು. ಕುಟೀರದ ನಿರ್ಮಾಣವನ್ನು ಸಕಾಲದಲ್ಲಿ ಮಾಡಿಕೊಟ್ಟ ದಿ। ಪ್ರಫುಲ್ಲಚಂದ್ರ ರಾವ್‌ರವರ ಪತ್ನಿ ಶ್ರೀಮತಿ ಪೂರ್ಣಿಮಾ ಪ್ರಫುಲ್ಲಚಂದ್ರ ರಾವ್ ಮತ್ತು ಪುತ್ರ ಪ್ರತೀಕ ಅವರನ್ನು ಸನ್ಮಾನಿಸಲಾಯಿತು.

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಸುರತ್ಕಲ್
## ಕಲಿಕಾ ಸಾಮಾಗ್ರಿಗಳ ವಿತರಣಾ ಸಮಾರಂಭ ಹಾಗೂ ಶಂಕರ ಜಯಂತಿ ಆಚರಣೆ



ತಾ.12.05.2024ನೇ ರವಿವಾರ ಸಂಜೆ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ರಿ. ಸುರತ್ಕಲ್ ಇದರ ವತಿಯಿಂದ ಹಾಗೂ ಶ್ರೀ ಸ್ಥಾನಿಕ ಮಹಾಮಂಡಲದ ಸಹಕಾರದೊಂದಿಗೆ ಮಲ್ಲಮಾರು ಭವಾನಿ ಶಂಕರ ರಾಯರ ಮನೆಯಲ್ಲಿನ ಶ್ರೀ ದುರ್ಗಾ ಸಭಾಂಗಣದಲ್ಲಿ ವೈದಿಕ ಶಿಬಿರವು ಉದ್ಘಾಟನೆಗೊಂಡಿತು. ಶಿಬಿರದಲ್ಲಿ ಭಾಗವಹಿಸಿದ ವಟುಗಳು ಹಾಗೂ ಸಮಾಜ ಬಾಂಧವರಿಗೆ ಪುರೋಹಿತರಾದ ಅಶ್ವತ ಭಟ್ ಹಳೆಯಂಗಡಿ ಇವರು ಜಪ, ತಪ ಹಾಗೂ ಶಂಕರಾಚಾರ್ಯರ ಪ್ರಾರ್ಥನೆಯನ್ನು ಕಲಿಸಿದರು.

ಮುಂದೆ ಅದೇ ವೇದಿಕೆಯಲ್ಲಿ ಡಾ। ದಯಾನಂದ ಎಸ್. ರಾವ್ ಎಜುಕೇಶನಲ್ ಟ್ರಸ್ಟ್ ಬೆಂಗಳೂರು ಇವರಿಂದ ಕೊಡಲ್ಪಟ್ಟ ಕಲಿಕಾ ಸಾಮಗ್ರಿಗಳ ವಿತರಣೆಯು ನಡೆಯಿತು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ, ಕಾಂತಾವರ ಪ್ರಭಾಕರ್ ರಾವ್ ಮತ್ತು ಖ್ಯಾತ ಎಲುಬು ತಜ್ಞರಾದ ಡಾ। ಪ್ರಶಾಂತ್ ಮೋಹನ್ ಭಾಗವಹಿಸಿದರು.

ಸಮಾರಂಭದಲ್ಲಿ ಆರ್ಥಿಕವಾಗಿ ಹಿಂದುಳಿದ, ನಮ್ಮ ಸಂಘದ ಇಂಜಿನಿಯರಿಂಗ್ ಕಲಿಯುತ್ತಿರುವ ವಿದ್ಯಾರ್ಥಿಗೆ, ಲ್ಯಾಪ್‌ಟಾಪ್, ಪೆನ್ ಡ್ರೈವ್, ಪುಸ್ತಕಗಳು ಹಾಗೂ ಶಾಲಾ ಬ್ಯಾಗ್‌ಗಳನ್ನು ವಿತರಿಸಲಾಯಿತು. ನಂತರ 9ನೇ ತರಗತಿಯಿಂದ, ಪದವಿ, ಸ್ನಾತಕೋತ್ತರ ಪದವಿಯ, ಒಟ್ಟು ಇಪ್ಪತ್ತು ವಿದ್ಯಾರ್ಥಿಗಳಿಗೆ ಕಲಿಕಾ ಸಾಮಾಗ್ರಿಗಳನ್ನು ವಿತರಿಸಲಾಯಿತು.

ಕಲಿಕಾ ಸಾಮಾಗ್ರಿಗಳನ್ನು ವಿತರಿಸಿ ಮಾತನಾಡಿದ ಕೆ. ಪ್ರಭಾಕರ್ ರಾವ್ ಹಾಗೂ ಡಾ। ಪ್ರಶಾಂತ್ ಮೋಹನ್‌ರವರು, ದಾನಿಗಳಿಂದ ದೊರಕಿದ ಸಹಾಯವನ್ನು, ಕಲಿಕೆಗೆ ಉಪಯೋಗಿಸಿಕೊಂಡು, ಮುಂದಿನ ದಿನಗಳಲ್ಲಿ ಉದ್ಯೋಗ ದೊರಕಿದ ಬಳಿಕ ಸಮಾಜದ ಇತರ ಮಕ್ಕಳಿಗೆ ಹಾಗೂ ಸಂಘಕ್ಕೆ ನೆರವಾಗಬೇಕೆಂದರು.

ಗೌರವಾಧ್ಯಕ್ಷರಾದ ಭವಾನಿ ಶಂಕರ ರಾವ್, ಉಪಾಧ್ಯಕ್ಷರಾದ ವಾಸುದೇವ ಶಾನುಭೋಗ್, ಶ್ರೀಮತಿ ಪರಿಮಳ ಪ್ರಶಾಂತ್, ಕೋಶಾಧಿಕಾರಿ ರಾಧಾಕೃಷ್ಣ ರಾವ್, ಯುವ ವೇದಿಕೆಯ ಅಧ್ಯಕ್ಷರಾದ ಶ್ರೀ ಸಂದೀಪ್ ಶಾನುಭೋಗ್ ಹಾಗೂ ಮಹಿಳಾ ವೇದಿಕೆ ಅಧ್ಯಕ್ಷರಾದ ಶ್ರೀಮತಿ ಸುನಿತಾ ಶ್ರೀಕಾಂತ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.


ಸಂಘದ ಅಧ್ಯಕ್ಷರಾದ ಸಿ. ರಾಘವೇಂದ್ರ ರಾವ್ ಅವರು, ಶ್ರೀ ಶಂಕರಾಚಾರ್ಯರ ಸಂಕ್ಷಿಪ್ತ ಪರಿಚಯ, ನಮ್ಮ ಸಮಾಜದ ಯುವಕ ಯುವತಿಯರು ಪ್ರತಿ ಕ್ಷೇತ್ರದಲ್ಲೂ ಮಾಡಬೇಕಾದ ಸಾಧನೆ ಹಾಗೂ ದಾನಿಗಳಿಂದ ಮತ್ತು ಸಂಘದಿಂದ ಪಡೆದ ಸಹಕಾರವನ್ನು ಸ್ಮರಿಸಿ, ಮುಂದೆ ಸಮಾಜ ಹಾಗೂ ಸಂಘಕ್ಕೆ ನೆರವಾಗಬೇಕೆಂದರು.

ಸಂಘದ ಪದಾಧಿಕಾರಿಗಳು ಹಾಗೂ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಚಂದಗಾಣಿಸಿದರು. ಕಾರ್ಯದರ್ಶಿ ಎಂ. ಪಾಲಚಂದ್ರ ಶರ್ಮ ಅವರು ಕಾರ್ಯಕ್ರಮ ನಿರೂಪಿಸುವುದರೊಂದಿಗೆ, ಗಣ್ಯರಿಗೆ ಹಾಗೂ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು.

ನಂತರ ನಡೆದ ಶ್ರೀ ಶಂಕರ ಜಯಂತಿ ಕಾರ್ಯಕ್ರಮದಲ್ಲಿ, ನಮ್ಮ ಸಂಘದ ಶ್ರೀ ಶಂಕರ ಭಜನಾ ಮಂಡಳಿಯಿಂದ ಹರಿನಾರಾಯಣರಾವ್ ರವರ ಮಾರ್ಗದರ್ಶನದಲ್ಲಿ ಭಜನಾ ಕಾರ್ಯಕ್ರಮ, ಸಂಘದ ಸದಸ್ಯರಿಂದ ಅಷ್ಟೋತ್ತರ ಪಾರಾಯಣ, ಶಿವಪಂಚಾಕ್ಷರಿ ಮೂಲ ಸ್ತೋತ್ರ ಪಠಣ ನಡೆಯಿತು. ಪೂಜೆ ನೆರವೇರಿಸಿ ಪುರೋಹಿತರಾದ ಹೆಜಮಾಡಿ ಕೃಷ್ಣರಾಜ ಭಟ್‌ರವರು ಶ್ರೀ ಶಂಕರಾಚಾರ್ಯರ ಜೀವನ ಸಾಧನೆ ಬಗ್ಗೆ ತಿಳಿಸಿ, ನಾವೆಲ್ಲರೂ ಧರ್ಮಾಚರಣೆಯಲ್ಲಿ ತೊಡಗಿಸಿಕೊಳ್ಳಬೇಕೆಂದು ತಿಳಿಸಿದರು.

ಪ್ರವೀಣ್ ಕುಮಾರ್ ಬಳಗದವರಿಂದ ತಯಾರಿಸಲಾಗಿದ್ದ ಉಪಹಾರದೊಂದಿಗೆ ಕಾರ್ಯಕ್ರಮವು ಸಂಪನ್ನಗೊಂಡಿತು.

## ನಾರ್ತ್ ಅಮೆರಿಕಾದ ಸ್ಥಾನಿಕ ಸಮಾಜದವರಿಂದ ಶಂಕರ ಜಯಂತಿ




ನಾರ್ತ್ ಅಮೆರಿಕಾದ ಸ್ಥಾನಿಕ ಸಮಾಜದವರು (Sthanika Samaja of North America) ತಮ್ಮ ಸಂಸ್ಥೆಯ ಸದಸ್ಯರನ್ನು ಸೇರಿಸಿ, ಶ್ರೀ ಶಂಕರಾಚಾರ್ಯರ ಹುಟ್ಟುಹಬ್ಬದ ಆಚರಣೆಯನ್ನು ಸಂಭ್ರಮದಿಂದ ಆನ್‌ಲೈನ್‌ನಲ್ಲಿ ತಾ.11.06.2024 ರಂದು ಆಚರಿಸಿದರು. ವಿಘ್ನವಿನಾಶಕ ಗಣಪತಿ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗಿ ಶ್ರೀ ಶಂಕರಾಚಾರ್ಯರ ಪೂಜೆಯೊಂದಿಗೆ, ಸಮಾಜ ಬಂಧುಗಳ ಕಲಾಪ್ರದರ್ಶನಗಳೊಂದಿಗೆ ಭರ್ಜರಿಯಾಗಿ ನಡೆಯಿತು. ಡಾ। ನಾಗಭೂಷಣ್ ಮೂಲ್ಕಿ ಹಾಗೂ ಡಾ। ಉಷಾ ಕೋಲ್ಲೆ ಶ್ರೀ ಶಂಕರ ಪೂಜೆಯನ್ನು ಮತ್ತು ಅಷ್ಟೋತ್ತರವನ್ನು ಮಾಡಿದರು. ರೋಹನ್ನಟೋಗಿಯವರು ಶ್ರೀ ಆದಿಶಂಕರರ ಮತ್ತು ಅವರ ಜೀವನದ ಬಗ್ಗೆ ವಿವರವಾಗಿ ಪ್ರಸ್ತುತಿಯನ್ನು ಮಾಡಿದರು. ಸುಬ್ರಹ್ಮಣ್ಯ ಶಾನುಭಾಗರು ಶ್ರೀ ಜಗದ್ಗುರು ಶಂಕರಾಚಾರ್ಯ ಮತ್ತು ಸ್ಥಾನಿಕ ಬ್ರಾಹ್ಮಣರ ನಡುವಿನ ಸಂಬಂಧ, The Sthanikas & their historical Importance (1938) by Dr. B.A. Saletore ಪುಸ್ತಕದ ಬಗ್ಗೆ ವಿವರಿಸಿದರು. ಮಾರ್ಪಳ್ಳಿ ಹರೀಶ್ ರಾವ್, ಲೋಹಿತ್, ಭವ್ಯ ಸುಧೀರ್, ರಮ್ಯಾ ಮತ್ತು ರಿತ್ವಿಕ್ ರಾವ್ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಚೆನ್ನಾಗಿ ನಿರ್ವಹಿಸಿದರು. ಚೇತನ್ ಅವರ ಧನ್ಯವಾದ ಸಮರ್ಪಣೆಯೊಂದಿಗೆ ಕಾರ್ಯಕ್ರಮವು ಸಮಾರೋಪಗೊಂಡಿತು. ಅನಿಲ್ ನಟ್ಟೋಜಿ ಅವರು ಸಾಂಸ್ಕೃತಿಕ ಕಾರ್ಯಕ್ರಮಗಳ ವಿಡಿಯೋಗಳನ್ನು ಜೋಡಿಸಿ ಯ್ಯೂಟ್ಯೂಬ್‌ನಲ್ಲಿ ಅಪ್ಲೋಡ್ ಮಾಡಿದರು.

ಕಾರ್ಯಕ್ರಮದಲ್ಲಿ ಆರ್ಯ ಜ್ಯೋತಿಪ್ರಕಾಶ್, ಅಪೂರ್ವ ರಾವ್, ಸಂವಿತ್ ಶಾನುಭಾಗ್, ಚರಿತ ಲೋಹಿತ್, ಧೃತಿ ರಾವ್, ಗಾಯತ್ರಿ ರಾವ್, ಮಾನಸ ಶಾನುಭೋಗ್, ನಿಧಿ ಲಂಬಾ, ರಾಘವೇಂದ್ರ ರಾವ್, ರಂಜಿನಿ ರಾವ್, ರಿತ್ವಿ ರಾವ್, ರಿತಿಕಾ ರಾವ್, ಸಾಕೇತ್ ಗೌನಲ್ಕರ್, ರೇಷ್ಮಾ ಕುಲ್ಕರ್ಣಿ, ಸುಮನಾ ನಟ್ಟೋಜಿ, ಅಪೂರ್ವ ರಾವ್, ವಾಣಿ ಹರೀಶ್ ರಾವ್ ಮುಂತಾದವರು ಭಾಗವಹಿಸಿದರು.

ಇದು ನಾರ್ತ್ ಅಮೆರಿಕಾದ ಸ್ಥಾನಿಕ ಸಮಾಜದ ಎರಡನೇ ವರ್ಷದ ಆನ್ಲೈನ್ ಮಿಲನ ಮತ್ತು ಕಾರ್ಯಕ್ರಮ ಆಗಿತ್ತು. ಹೀಗೆ ಮುಂದೆ ಇನ್ನು ಹೆಚ್ಚು ಕಾರ್ಯಕ್ರಮಗಳನ್ನು ಮಾಡಲು ಸಮಾಜ ಬಾಂಧವರ ಬೆಂಬಲ, ಸಹಕಾರ, ಉತ್ತೇಜನ, ಮಾರ್ಗದರ್ಶನ ಹಾಗೂ ಶೃಂಗೇರಿ ಗುರುಗಳ ಮತ್ತು ಶ್ರೀ ಶಾರದಾಂಬೆಯ ಅನುಗ್ರಹ ದೊರಕಲಿ ಎಂದು ಪ್ರಾರ್ಥಿಸುತ್ತೇವೆ.

## ಮುಂಬೈನಲ್ಲಿ ಶ್ರೀ ಶಂಕರಾಚಾರ್ಯ ಜಯಂತಿ ಆಚರಣೆ





ಶ್ರೀ ಸುಬ್ರಹ್ಮಣ್ಯ ಸೇವಾ ಸಂಘ ಮುಂಬೈ ಅವರು ತಾ.12.05.2024 ರಂದು ಸಯನ್ ಮುಂಬೈನಲ್ಲಿರುವ ಗೋಕುಲದಲ್ಲಿ ಶ್ರೀ ಶಂಕರಾಚಾರ್ಯ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಿದರು. ಪ್ರಾತಃಕಾಲ ದೇವತಾ ಪ್ರಾರ್ಥನೆ, ಪುಣ್ಯಾಹವಾಚನ, ಗಣಹೋಮ, ರುದ್ರಾಭಿಷೇಕ, ರುದ್ರಪಾರಾಯಣ, ಶ್ರೀ ರಾಮನಾಮ ಮಂತ್ರ ತಾರಕ ಹೋಮ, ಶಂಕರಾಚಾರ್ಯ ಪೂಜೆ ಮತ್ತು ಶಿವ ಸಹಸ್ರನಾಮಾರ್ಚನೆ ನಡೆಯಿತು. ಪೂರ್ಣಾಹುತಿಯ ಬಳಿಕ ತೀರ್ಥ ಪ್ರಸಾದದ ಮತ್ತು ಬೆಂಗಳೂರಿನಿಂದ ಬಂದ ಶ್ರೀ ಬಿ.ವಿ. ರಾಯರಿಂದ ಶಂಕರಾಚಾರ್ಯರ ಕುರಿತು ಪ್ರವಚನ ಹಾಗೂ ಅನ್ನ ಸಂತರ್ಪಣೆ ನೆರವೇರಿತು.

ವರದಿ : ಉಮೇಶ್ ರಾವ್ ಕೆ. ಮುಂಬೈ

## ಯುಗಾದಿಯ ಹಾಡು

ಗಜನಿಂಬೆ ಮಾಗಾಯ ಪಾನಕವ ಕುಡಿಯಿರಿ, ಬೇವ ಸವಿಯಿರಿ... ಬಂತು ಬಂತು ಯುಗಾದಿ, ಬಂತೂ ಬಂತೂ ಯುಗಾದಿ.

ಪರಿಮಳೋದಕ ಚೆಲ್ಲಿ, ಮನೆ ಮನೆಗೆ ನಡೆದಿರಲು
ಮಘ ಮಘಸುತಿದೆ. ಮಘ ತೀಡಿ ತೀಡಿ.
ಹೊಸ ಬಟ್ಟೆಗಳ ತೊಟ್ಟು, ಹಣೆಗೆ ಕಸ್ತೂರಿ ಇಟ್ಟು
ಹೊಸ ವರುಷ ಸ್ವಾಗತಿಸು ಹರುಷದಿಂದ
ಬಂಗಾರವಾಗಲಿ ಬಾಳ ಮುಸುಕಿದ ಕಲುಷ
ಇಂದಿಮ್ಮ ನಿಜಪ್ರೇಮ ಹರುಷದಿಂದ ॥೧॥
ಈ ಯುಗಾದಿಯ ಬರವು ಸೊಗದ ಬರವಾಗಲಿ,
ಪ್ರೇಮವೇ ಜೀವನದ ಸ್ವರವಾಗಲಿ
ಮನೆ ಮನೆಗೆ ಸಾಹಿತ್ಯ, ಪತ್ರ ಕಲಾಕ್ಷೇತ್ರ
ತರುವಂತ ಪರಶಿವನ ವರವಾಗಲೀ ॥೨॥

ಎ. ಮಣಿಪ್ರಭಾಶರ್ಮ
ಸಂಗ್ರಹ





RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS



ಕೆ. ದಿನಮಣಿ ಶಾಸ್ತ್ರೀ ಮೊಬೈಲ್ : 8277190632
9482284970





ಚಿತ್ತಾರ ಫೋಟೋ ಆರ್ಟ್
ಶುಭ ಸಮಾರಂಭಗಳ ಛಾಯಾಚಿತ್ರ ಮತ್ತು ವೀಡಿಯೋಗಾಗಿ ಕರೆಮಾಡಿ
ಚಿತ್ತಾರ, 3/96, ನವೋದಯನಗರ, ಚಾಂತಾರು, ಅಗ್ರಹಾರ, ಬ್ರಹ್ಮಾವರ–576213.

## ಶುಭ ಜನನ

ಶ್ರೀಮತಿ ವರ್ಷಿಣಿ (D/o ಮೋಹನ್ ರಾವ್ ಕೊಯಿಲ ಮತ್ತು ಶ್ರೀಮತಿ ಗೀತಾ ಎಂ. ರಾವ್) ಹಾಗೂ ಸುದರ್ಶನ್ ಕೋಲ್ಪೆ (S/o ಹರೀಶ್ ರಾವ್ ಕೋಲ್ಪೆ ಮತ್ತು ಶ್ರೀಮತಿ ಸುಮಿತ್ರಾ ಎಚ್. ರಾವ್) ದಂಪತಿಗೆ ತಾ.11.05.2024 ರಂದು ಹೆಣ್ಣು ಮಗುವಿನ ಜನನ.

**** ****

ಶ್ರೀಮತಿ ಕಾವ್ಯ (D/o ಶ್ರೀಮತಿ ಸುರೇಖಾ ಮತ್ತು ಅದ್ಯಪಾಡಿ ಶ್ರೀಕೃಷ್ಣ ಸ್ವಾಮಿ, ಬೆಂಗಳೂರು) ಮತ್ತು ಅಭಿಷೇಕ್ ಪಲಿಮಾರು (S/o ಶ್ರೀಮತಿ ಉಷಾ ಮತ್ತು ನಟರಾಜ್ ಪಲಿಮಾರು, ಮಂಗಳೂರು) ದಂಪತಿಗೆ ತಾ.13.05.2024 ರಂದು ಬೆಂಗಳೂರಿನಲ್ಲಿ ಅವಳಿ ಗಂಡು ಮಕ್ಕಳ ಜನನ.

## ಬ್ರಹ್ಮೋಪದೇಶ

ಸೂರ್ಯಪ್ರಕಾಶ ರಾವ್ ಎಚ್ ಮತ್ತು ದಿ। ಶ್ರೀಮತಿ ಲಲಿತ ಎಸ್. ಮೈರ್‌ಕೋಮೆ ಹಾಗೂ ರಾಧಾಕೃಷ್ಣ ರಾವ್ ಮತ್ತು ರೋಹಿಣಿ ಬದಂಜ ಅವರ ಪೌತ್ರ ಅನಂತರಾಮ ಮತ್ತು ಮಂಜುಶ್ರೀ ದಂಪತಿಯ ಪುತ್ರ ಚಿ। ಮನನರಾಮನ ಬ್ರಹ್ಮೋಪದೇಶವು ತಾ.03.05.2024 ರಂದು ಶ್ರೀ ಬಲಮುರಿ ವಿನಾಯಕ ದೇವಸ್ಥಾನ ಹೆಗ್ಗುಂಜೆ, ಮಂದಾರ್ತಿಯಲ್ಲಿ ನೆರವೇರಿತು.

## ಗೃಹಪ್ರವೇಶ

ಸುರೇಶ ಬಿ. ಮತ್ತು ಸಹೋದರರು ತಾ.09.06.2024ರಂದು ಶಿವಮೊಗ್ಗ ಕೋಟೆ ರಸ್ತೆಯಲ್ಲಿ ನೂತನವಾಗಿ ನಿರ್ಮಿಸಿದ ಶ್ರೀಲಕ್ಷ್ಮೀನಿವಾಸದ ಗೃಹಪ್ರವೇಶ ಜರಗಿತು.


## ಭೀಮರಥಿ ಶಾಂತಿ

ಮೋಹನ್ ದೇವ್ ಅವರು ತಾ.10.05.2024ರಂದು ಉಡುಪಿ ಶ್ರೀ ಶಾರದಾ ಮಂಟಪದಲ್ಲಿ ತಮ್ಮ ಭೀಮರಥಿ ಶಾಂತಿ (70ನೇ ವರ್ಷ)ಯನ್ನು ಧಾರ್ಮಿಕ ವಿಧಿಗಳೊಂದಿಗೆ ಪತ್ನಿ ಉಷಾ ಮೋಹನ್‌ದೇವ್ ಮಕ್ಕಳು, ಮೊಮ್ಮಕ್ಕಳು, ಕುಟುಂಬಿಕರು ಹಾಗೂ ಬಂಧು ಮಿತ್ರರೊಂದಿಗೆ ಆಚರಿಸಿಕೊಂಡರು.

## ಐಂದ್ರಿ ಶಾಂತಿ

ತಾ.13.05.2024ನೇ ಸೋಮವಾರ ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ಬಾರ್ಕೂರು ಬಿ.ಕೆ. ಲಕ್ಷ್ಮೀನಾರಾಯಣ ರಾವ್ ಮತ್ತು ಸುಜಾತ ಬಿ.ಕೆ. ದಂಪತಿಗಳು ತಮ್ಮ 75ನೇ ವರ್ಷದ ಐಂದ್ರಿ ಶಾಂತಿ ಕಾರ್ಯಕ್ರಮವನ್ನು ಮಕ್ಕಳು, ಮೊಮ್ಮಕ್ಕಳು, ಕುಟುಂಬಿಕರು, ಬಂಧುಮಿತ್ರರೊಂದಿಗೆ ಆಚರಿಸಿಕೊಂಡರು.

## ಶ್ರೀ ಮಹಾವಿಷ್ಣುಮೂರ್ತಿ ದೇವಸ್ಥಾನ ಕರ್ವಾಲಿಗೆ ಕ್ರಿಕೆಟಿಗ ರವಿಶಾಸ್ತ್ರಿಯವರ ಭೇಟಿ



ತಾ.14.05.2024 ರಂದು ಶ್ರೀ ಮಹಾವಿಷ್ಣುಮೂರ್ತಿ ದೇವಸ್ಥಾನ ಕರ್ವಾಲಿಗೆ ಖ್ಯಾತ ಅಂತರರಾಷ್ಟ್ರೀಯ ಕ್ರಿಕೆಟಿಗ ರವಿಶಾಸ್ತ್ರಿಯವರು ಭೇಟಿ ನೀಡಿದ ಕ್ಷಣ. ಆ ಸಂದರ್ಭ ಕ್ಷೇತ್ರದ ಆಡಳಿತ ಮೊಕ್ತೇಸರರಾದ ಕೆ. ಅನಂತ ಪಟ್ಟಾಭಿ ರಾವ್, ಸಂಘದ ಕಾರ್ಯದರ್ಶಿಗಳಾದ ಸತೀಶ್ ರಾವ್ ಐ.ಕೆ. ಹಾಗೂ ಜೊತೆ ಕಾರ್ಯದರ್ಶಿ ಸುಬ್ರಹ್ಮಣ್ಯ ಶರ್ಮ ಜೊತೆಗಿದ್ದರು.

Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

*With Best Complimemts From*
SRI M. SHAILESH RAO
Ph : 9448624324
B.E., Civil
Civil Engineer & Contractor
SRI MALAVIKA ASSOCIATES
KALSANKA-UDUPI ROAD, UDUPI.
Website : shreemaalavikaassociates.com

GST : 29AKMPN4985H1ZD
ಶ್ರೀ ಕೃಷ್ಣ ಎಲೆಕ್ಟ್ರಾನಿಕ್ಸ್ & ಎಲೆಕ್ಟ್ರಿಕಲ್ಸ್
Mob. 9448953022
SHREE KRISHNA
ELECCTRONICS & ELECTRICALS
Sri Balaji Complex, Shop No-G-7, Near KSRTC Bus Stand, Udupi - 576101.
City Towers, Service Bus Stand, Near Rao and Rao Circle, State Bank, Mangalore - 575001
Branch at Mahalaxmi Prabha Complex, Market Road, Opp Tajmahal Hotel, Karkala

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 4-00ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4-00ರಿಂದ

**ತಾ.25-06-2024 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.100/-)**

**ತಾ.22-06-2024 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.26-06-2024 ಹಾಗೂ 11.07.2024 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಮಿಥುನ ಮಾಸದ ವಿಶೇಷ ದಿನಗಳು

| | | | |
|---|---|---|---|
| 14.06.2024 | ಮಿಥುನ ಸಂಕ್ರಮಣ | 02.07.2024 | ಸರ್ವೈಕಾದಶೀ |
| 18.06.2024 | ಸರ್ವೈಕಾದಶೀ-ನಿರ್ಜಲ | 05.07.2024 | ಅಮಾವಾಸ್ಯೆ |
| 20.06.2024 | ದಕ್ಷಿಣಾಯನ ಆರಂಭ | 06.07.2024 | ಗ್ರೀಷ್ಮ ಋತು ಆಷಾಢ ಮಾಸದ ಶುಕ್ಲ ಪಕ್ಷಾರಂಭ |
| 22.06.2024 | ಹುಣ್ಣಿಮೆ | 16.07.2024 | ಕರ್ಕಾಟಕ ಸಂಕ್ರಮಣ |
| 23.06.2024 | ಗ್ರೀಷ್ಮ ಋತು ಜೇಷ್ಠ ಮಾಸದ ಕೃಷ್ಣ ಪಕ್ಷಾರಂಭ | 17.07.2024 | ಸರ್ವೈಕಾದಶೀ |
| 25.06.2024 | ಸಂಕಷ್ಟಹರ ಚತುರ್ಥಿ, ಚಂದ್ರೋದಯ ರಾತ್ರಿ 10.14ಕ್ಕೆ | | |

## ನಿಧನ



ಕಾಂತಾವರ ಜಯಪ್ರಕಾಶ ರಾವ್ ಅವರು 82ನೇ ವಯಸ್ಸಿನಲ್ಲಿ ತಾ.10.05.2024 ರಂದು ನಿಧನರಾದರು. ಅವರು ಪತ್ನಿ, ಒಬ್ಬ ಪುತ್ರ ಮತ್ತು ಒಬ್ಬಳು ಪುತ್ರಿಯನ್ನು ಅಗಲಿದ್ದಾರೆ.

**** ****



ಪಾಂಡವಪುರದ ಸೀತಾರಾಮ್ ಮತ್ತು ಶ್ರೀಮತಿ ಪ್ರಸನ್ನ ದಂಪತಿಯ ಹಿರಿಯ ಪುತ್ರ ಅರವಿಂದ್ ಅವರು 48ನೇ ವಯಸ್ಸಿನಲ್ಲಿ ತಾ.12.05.2024 ರಂದು ನಿಧನರಾದರು. ಅವರು ಪತ್ನಿ ಮತ್ತು ಒಬ್ಬ ಪುತ್ರನನ್ನು ಅಗಲಿದ್ದಾರೆ.

**** ****




ಚೆಂಬೂರಿನ ಡಾ। ನಂದಳಿಕೆ ಮೋಹನ್ ಎ. ರಾವ್ (ದಿ। ನಂದಳಿಕೆ ಆನಂದ್ ರಾವ್ ಅವರ ಪುತ್ರ ಹಾಗೂ ಡಾ। ಶ್ರೀಮತಿ ವನಿತಾ ರಾವ್ ಅವರ ಪತಿ) ಅವರು 78ನೇ ವಯಸ್ಸಿನಲ್ಲಿ ತಾ.20.05.2024 ರಂದು ನಿಧನರಾದರು. ಅವರು ಪತ್ನಿ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

**** ****



ಖ್ಯಾತ ಪಾಕತಜ್ಞ ಮುರಳೀಧರ ರಾವ್ (ಮುಕ್ಕ ಹರಿನಾರಾಯಣ ರಾವ್ ಮತ್ತು ಶ್ರೀಮತಿ ಸರಸ್ವತಿ ದಂಪತಿಯ ಪುತ್ರ) ಅವರು 49ನೇ ವಯಸ್ಸಿನಲ್ಲಿ ತಾ.03.06.2024 ರಂದು ನಿಧನರಾದರು. ಅವರು ಪತ್ನಿ, ಒಬ್ಬ ಪುತ್ರ ಹಾಗೂ ಒಬ್ಬಳು ಪುತ್ರಿಯನ್ನು ಅಗಲಿದ್ದಾರೆ.

**** ****



ಮುಂಬೈ ಡೊಂಬಿವಿಲಿ ನಿವಾಸಿ ಪಾದೆಬೆಟ್ಟು ಗೋಪಾಲಕೃಷ್ಣ ರಾವ್ ಅವರು 78ನೇ ವಯಸ್ಸಿನಲ್ಲಿ ತಾ.03.06.2024ರಂದು ನಿಧನರಾದರು. ಅವರು ಪತ್ನಿಯನ್ನು ಅಗಲಿದ್ದಾರೆ.

**** ****



ಮಂಗಳೂರು ನಿವಾಸಿ ಶ್ರೀಯುತ ಕಿರಣ್ ನೆಲ್ಲಿಕುಂಜೆ ಅವರು 49ನೇ ವಯಸ್ಸಿನಲ್ಲಿ ತಾ.09-06-2024ರಂದು ನಿಧನರಾದರು. ಅವರು ನೆಲ್ಲಿಕುಂಜೆ ದಿ। ಸುಬ್ಬರಾವ್ ಹಾಗೂ ಸರಳಾದೇವಿ ದಂಪತಿಯ ಪುತ್ರ. ಅವರು ಪತ್ನಿ, ಒಬ್ಬ ಪುತ್ರ ಹಾಗೂ ಒಬ್ಬಳು ಪುತ್ರಿಯನ್ನು ಅಗಲಿದ್ದಾರೆ.

**** ****



ಮಸ್ಕಿಬೈಲ್ ಗೋವಿಂದ್ ರಾವ್ ಅವರು 89ನೇ ವಯಸ್ಸಿನಲ್ಲಿ ತಾ.04.06.2024 ರಂದು ನಿಧನರಾದರು. ಅವರು ಪತ್ನಿ, ಇಬ್ಬರು ಪುತ್ರರು ಹಾಗೂ ಒಬ್ಬಳು ಪುತ್ರಿಯನ್ನು ಅಗಲಿದ್ದಾರೆ.

**** ****



ಐ.ಕೆ. ಸುಧಾಕರ ರಾವ್ ಅವರು 77ನೇ ವಯಸ್ಸಿನಲ್ಲಿ ತಾ.06.06.2024 ರಂದು ನಿಧನರಾದರು.



## ಎಸ್.ಎಸ್.ಎಲ್.ಸಿ ಸಾಧಕರು



**ಸತ್ಯಸ್ವರೂಪ್**
ಹೆಜಮಾಡಿಯ ರಾಜಶೇಖರ್ ರಾವ್ ಮತ್ತು ಶ್ರೀಮತಿ ವಿಜವಲ್ಲಿ ದಂಪತಿಯ ಪುತ್ರ ಸತ್ಯಸ್ವರೂಪ್ ಅವರು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 613/625 ಅಂಕಗಳಿಸಿದ್ದಾರೆ.



**ಮೋಹಿತ್ ರಾವ್**
ರಾಕೇಶ್ ರಾವ್ ಮತ್ತು ಶ್ರೀಮತಿ ಶ್ವೇತಾ ರಾವ್ ಎಲ್ಲೂರು ದಂಪತಿಯ ಪುತ್ರ ಮೋಹಿತ್ ರಾವ್ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 601/625 (96.16%) ಅಂಕಗಳಿಸಿದ್ದಾರೆ.



**ಪ್ರಜ್ಞಾ**
ಆನಂದ್ ಕುಮಾರ್ ಮತ್ತು ಶ್ರೀಮತಿ ಪ್ರಶಾಂತಿ ಮೈಸೂರು ದಂಪತಿಯ ಪುತ್ರಿ ಪ್ರಜ್ಞಾ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 610/625 (97.6%) ಅಂಕಗಳಿಸಿದ್ದಾರೆ.




**ಕೃಪಾಕರ**
ಸ್ಕಂದಸ್ವಾಮಿ ಮತ್ತು ಶ್ರೀಮತಿ ಕಿರಣ್ ಮುಕ್ಕಾ ದಂಪತಿಯ ಪುತ್ರ ಕೃಪಾಕರ ಅವರು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 594/625 ಅಂಕಗಳಿಸಿದ್ದಾರೆ.



**ಸಾತ್ವಿಕ್ ಪಿ.ಎಸ್.**
ಪಿ.ಎಸ್. ಶ್ರೀನಾಥ್ ಮತ್ತು ಜ್ಯೋತಿ ರಾವ್ (ಆರ್ಗ ತೀರ್ಥಹಳ್ಳಿ) ದಂಪತಿಯ ಪುತ್ರ ಸಾತ್ವಿಕ್ ಪಿ.ಎಸ್. ಎಸ್. ಎಸ್.ಎಲ್.ಸಿ. ಪರೀಕ್ಷೆಯಲ್ಲಿ 554 ಅಂಕಗಳಿಸಿದ್ದಾರೆ.



**ಆರುಷ್**
ಪ್ರಕಾಶ್ ರಾವ್ ಮತ್ತು ಶ್ರೀಮತಿ ಸುಮಿತ್ರಾ (D/o ಎರ್ಮಾಳು ನಾರಾಯಣ ರಾವ್ ಮತ್ತು ಶ್ರೀಮತಿ ಸುಲೋಚನಾ) ಚೇಲಾಯೂರೆ ಸುರತ್ಕಲ್ ದಂಪತಿಯ ಪುತ್ರ ಆರುಷ್ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 612/625 ಅಂಕಗಳಿಸಿದ್ದಾರೆ.



**ಕೆ. ಆಯುಷ್ ರಾವ್**
ನಾವೂರು ಕೃಷ್ಣ ರಾವ್ ಮತ್ತು ಶ್ರೀಮತಿ ಆಶಾ ದಂಪತಿಯ ಪುತ್ರ ಕೆ. ಆಯುಷ್ ರಾವ್ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 619 (99.04%) ಅಂಕ ಪಡೆದು ಸುಳ್ಯ ತಾಲೂಕಿನಲ್ಲಿ ಎರಡನೇ ಸ್ಥಾನ ಹಾಗೂ ರಾಜ್ಯದಲ್ಲಿ 7ನೇ ಸ್ಥಾನ ಪಡೆದಿದ್ದಾರೆ.




**ಅದಿತಿ ವಿ.ರಾವ್**
ಯು.ಎಸ್. ವಿವೇಕ್ ರಾವ್ ಮತ್ತು ಶ್ರೀಮತಿ ಕಲಾನಿಧಿ ಕದ್ರಿ, ಮಂಗಳೂರು ದಂಪತಿಯ ಪುತ್ರಿ ಕುಮಾರಿ ಅದಿತಿ ವಿ.ರಾವ್ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 613/625 ಅಂಕಗಳಿಸಿದ್ದಾರೆ.



**ಅದಿತಿ ಎಂ. ರಾವ್**
ಕಟಪಾಡಿ ಮೋಹನ್ ರಾವ್ ಮತ್ತು ಶ್ರೀಮತಿ ಸ್ವರ್ಣ ದಂಪತಿಯ ಪುತ್ರಿ ಕು. ಅದಿತಿ ಎಂ. ರಾವ್ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 587/625 ಅಂಕಗಳಿಸಿದ್ದಾರೆ.



**ಕೃಷ್ಣ ಎನ್.**
ನವೀನ್ ಚೊಕ್ಕಾಡಿ ಮತ್ತು ಶ್ರೀಮತಿ ಶಾಲಿನಿ ದಂಪತಿಯ ಪುತ್ರ ಕೃಷ್ಣ ಎನ್. ಎಸ್.ಎಸ್.ಎಲ್.ಸಿ. (ಸಿ.ಬಿ.ಎಸ್.ಸಿ.) ಪರೀಕ್ಷೆಯಲ್ಲಿ ಶೇ.80 ಅಂಕಗಳಿಸಿದ್ದಾರೆ.



**ಅನನ್ಯ ರಾವ್**
ಕೆ. ಹರಿಪ್ರಸಾದ್ ರಾವ್ ಮತ್ತು ಶ್ರೀಮತಿ ಪ್ರತಿಮಾ ರಾವ್ ದಂಪತಿಯ ಪುತ್ರಿ ಅನನ್ಯ ರಾವ್ ಎಸ್.ಎಸ್.ಎಲ್.ಸಿ. (ಸಿ.ಬಿ.ಎಸ್.ಸಿ.) ಪರೀಕ್ಷೆಯಲ್ಲಿ 446/500 ಅಂಕಗಳಿಸಿದ್ದಾರೆ.



**ಪ್ರತೀಕ್ ರಾವ್**
ನವೀನ್ ರಾವ್ ಮತ್ತು ಶ್ರೀಮತಿ ರಶ್ಮಿ ರಾವ್ ಗೋವಾ ದಂಪತಿಯ ಪುತ್ರ ಪ್ರತೀಕ್ ರಾವ್ ಎಸ್.ಎಸ್.ಎಲ್.ಸಿ. (ಸಿ.ಬಿ.ಎಸ್.ಸಿ.) ಪರೀಕ್ಷೆಯಲ್ಲಿ 91% ಅಂಕಗಳಿಸಿದ್ದಾರೆ.



**ಪ್ರಮಿತಿ ಜೆ. ಪಟ್ಲ**
ಜಯಂತರಾಜ ವಿ.ಪಿ. ಮತ್ತು ಶ್ರೀಮತಿ ಸೀಮಾ ಜಯಂತ್ ಬೆಂಗಳೂರು ದಂಪತಿಯ ಪುತ್ರಿ ಪ್ರಮಿತಿ ಜೆ. ಪಟ್ಲ ಎಸ್.ಎಸ್.ಎಲ್.ಸಿ. (ಸಿ.ಬಿ.ಎಸ್.ಸಿ.) ಪರೀಕ್ಷೆಯಲ್ಲಿ 97% ಅಂಕಗಳಿಸಿದ್ದಾರೆ.




**ಸಿಮ್ರಾನ್ ರಾವ್**
ನವೀನ್ ಕುಮಾರ್ ಮತ್ತು ಶ್ರೀಮತಿ ಪಲ್ಲವಿ ರಾವ್ ಬೆಂಗಳೂರು ದಂಪತಿಯ ಪುತ್ರಿ ಸಿಮ್ರಾನ್ ರಾವ್ ಎಸ್.ಎಸ್.ಎಲ್.ಸಿ. (ಸಿ.ಬಿ.ಎಸ್.ಸಿ.) ಪರೀಕ್ಷೆಯಲ್ಲಿ 90% ಅಂಕಗಳಿಸಿದ್ದಾರೆ.



**ಶಾರ್ವರಿ ಶಾನುಭಾಗ್**
ಸತ್ಯಜಿತ್ ಶಾನುಭಾಗ್ ಮತ್ತು ಶ್ರೀಮತಿ ಶೋಭಾ ಶಾನುಭಾಗ್ ಲೋನಂದ್ ದಂಪತಿಯ ಪುತ್ರಿ ಶಾರ್ವರಿ ಶಾನುಭಾಗ್ ಎಸ್.ಎಸ್.ಎಲ್.ಸಿ (ಸಿ.ಬಿ.ಎಸ್.ಸಿ.) ಪರೀಕ್ಷೆಯಲ್ಲಿ 83% ಅಂಕಗಳಿಸಿದ್ದಾರೆ.



**ಸಕ್ಷಮ್ ಶ್ಯಾನುಭೋಗ್**
ಶ್ರೀನಿವಾಸ್ ಶ್ಯಾನುಭೋಗ್ ಮತ್ತು ಸೌಮ್ಯ ರಾವ್ ದಂಪತಿಯ ಪುತ್ರ ಸಕ್ಷಮ್ ಶ್ಯಾನುಭೋಗ್ ಎಸ್.ಎಸ್.ಎಲ್.ಸಿ. (ಐ.ಸಿ.ಎಸ್.ಸಿ.) ಪರೀಕ್ಷೆಯಲ್ಲಿ 91.2% ಅಂಕಗಳಿಸಿದ್ದಾರೆ.



**ಮಿಹಿರಾ ಅಮಿತ್ ಶಾನುಭಾಗ್**
ದುಬೈನ ಇಂಡಿಯನ್ ಹೈಸ್ಕೂಲ್‌ನಲ್ಲಿ ಓದುತ್ತಿರುವ ಅಮಿತ್ ಶಾನುಭಾಗ್ ಮತ್ತು ಶ್ರೀಮತಿ ನಿವೇದಿತಾ ದಂಪತಿಯ ಪುತ್ರಿ ಮಿಹಿರಾ ಅಮಿತ್ ಶಾನುಭಾಗ್ ಎಸ್.ಎಸ್.ಎಲ್.ಸಿ. (ಸಿ.ಬಿ.ಎಸ್.ಸಿ.) ಪರೀಕ್ಷೆಯಲ್ಲಿ 97.6% (488/500) ಅಂಕಗಳಿಸಿದ್ದಾರೆ.



**ಅನನ್ಯಾ ಜೋಯಿಷಿ**
ಸುಧಾಕರ ಮತ್ತು ಶ್ರೀಮತಿ ಸಂಧ್ಯಾರಾಣಿ ಜೋಯಿಷಿ ದಂಪತಿಯ ಪುತ್ರಿ ಅನನ್ಯಾ ಜೋಯಿಷಿ ಎಸ್.ಎಸ್.ಎಲ್.ಸಿ. (ಸಿ.ಬಿ.ಎಸ್.ಸಿ.) ಬೋರ್ಡ್ ಪರೀಕ್ಷೆಯಲ್ಲಿ 97.2% ಅಂಕಗಳಿಸಿದ್ದಾರೆ.



**ಕೆ. ಅಂಕಿತ ರಾವ್**
ಕೆ. ಅವಿನಾಶ್ ರಾವ್ ಮತ್ತು ಶ್ರೀಮತಿ ಅನಿತಾ ರಾವ್ ದಂಪತಿಯ ಪುತ್ರಿ ಕೆ. ಅಂಕಿತ ರಾವ್ (ಸಿ.ಬಿ.ಎಸ್.ಸಿ.) ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 91% ಅಂಕಗಳಿಸಿದ್ದಾರೆ.



**ಚಿರಾಗ್**
ನವೀನ್ ಮತ್ತು ಶ್ರೀಮತಿ ಸೌಮ್ಯಲತಾ ದಂಪತಿಯ ಪುತ್ರ ಚಿರಾಗ್ ಎಸ್‌ಎಸ್‌ಎಲ್‌ಸಿ (ಸಿ.ಬಿ.ಎಸ್.ಸಿ.) ಪರೀಕ್ಷೆಯಲ್ಲಿ 94% ಅಂಕಗಳಿಸಿದ್ದಾರೆ.



**ಆದಿತ್ಯ ಬೈಲಕೆರೆ**
ಬೆಂಗಳೂರಿನ ಅಜಿತ್ ಬೈಲಕೆರೆ ಮತ್ತು ಶ್ರೀಮತಿ ಮೀನಾಕ್ಷಿ ದಂಪತಿಯ ಪುತ್ರ ಆದಿತ್ಯ ಬೈಲಕೆರೆ (ಸಿಬಿಎಸ್‌ಸಿ) ಎಸ್‌ಎಸ್‌ಎಲ್ ಪರೀಕ್ಷೆಯಲ್ಲಿ 90.7% ಅಂಕ ಗಳಿಸಿದ್ದಾರೆ.




**ಪ್ರಣವ್ ರಾವ್**
ಪ್ರಶಾಂತ್ ರಾವ್ ಮತ್ತು ಶ್ರೀಮತಿ ಸೌಮ್ಯ ಪ್ರಶಾಂತ್ ದಂಪತಿಯ ಪುತ್ರ ಪ್ರಣವ್ ರಾವ್ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ (ಸಿಬಿಎಸ್‌ಸಿ) 86.5% ಅಂಕ ಗಳಿಸಿದ್ದಾರೆ.

## ದ್ವಿತೀಯ ಪಿಯುಸಿ ಸಾಧಕರು



**ಅನ್ವಿತಾ**
ರಾಘವೇಂದ್ರ ಮಾಧವ ರಾವ್ ಮತ್ತು ಶ್ರೀಮತಿ ಜಯಲಕ್ಷ್ಮಿ ದಂಪತಿಯ ಪುತ್ರಿ ಅನ್ವಿತಾ ದ್ವಿತೀಯ ಪಿಯುಸಿ ಸಿ.ಬಿ.ಎಸ್.ಸಿ. ಪರೀಕ್ಷೆಯಲ್ಲಿ 463/500 (93%) ಅಂಕ ಗಳಿಸಿದ್ದಾರೆ.



**ದೇವ್ಯಾನಿ ರಾವ್**
ಶೈಲೇಶ್ ಪಿ. ರಾವ್ ಮತ್ತು ಶ್ರೀಮತಿ ತನು ಸಮಾಕ್ ದಂಪತಿಯ ಪುತ್ರಿ ದೇವ್ಯಾನಿ ರಾವ್ ಅವರು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ (ಸಿ.ಬಿ.ಎಸ್.ಸಿ) 473/500 (94.6%) ಅಂಕಗಳಿಸಿದ್ದಾರೆ.



**ಅರ್ನವ್ ಪ್ರಶಾಂತ್**
ಪ್ರಶಾಂತ್ ಅಲೆವೂರು ಮತ್ತು ಅನುರಾಧಾ ಪ್ರಶಾಂತ್ ದಂಪತಿಯ ಪುತ್ರ ಅರ್ನವ್ ಪ್ರಶಾಂತ್ ಅವರು ದ್ವಿತೀಯ ಪಿಯುಸಿ (ಸಿ.ಬಿ.ಎಸ್.ಸಿ) ಪರೀಕ್ಷೆಯಲ್ಲಿ 98% ಅಂಕ ಗಳಿಸಿದ್ದಾರೆ.



**ಅವನಿ**
ನಿತಿನ್ ಕುಮಾರ್ ಕೆ. ಮತ್ತು ಶ್ರೀಮತಿ ಅಕ್ಷತಾ ದಂಪತಿಯ ಪುತ್ರಿ ಕುಮಾರಿ ಅವನಿ ದ್ವಿತೀಯ ಪಿಯುಸಿ ವಿಜ್ಞಾನ ಪರೀಕ್ಷೆಯಲ್ಲಿ 583/600 ಅಂಕಗಳಿಸಿದ್ದಾರೆ.

## ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ.) ಮಂಗಳೂರು – ವಿವಿಧ ಸಂಘಗಳಲ್ಲಿ ವೈದಿಕ ಶಿಬಿರ



ತಾ.12.05.2024ರಂದು ಸುಬ್ರಹ್ಮಣ್ಯ ಸಭಾ ಮಂಗಳೂರಿನಲ್ಲಿ...




ತಾ. 12.05.2024ರಂದು ಸ್ಥಾನಿಕ ಬ್ರಾಹ್ಮಣ ಸಂಘ ಸುರತ್ಕಲ್‌ನಲ್ಲಿ....



ತಾ.12.05.2024ರಿಂದ ಕಾರ್ಕಳ ಶಂಕರ ಪ್ರತಿಷ್ಠಾನ (ರಿ.)ನಿಂದ....



ಶಿವಬ್ರಾಹ್ಮಣ ಸ್ಥಾನಿಕ ಸಮಾಜ ಸೇವಾ ಸಂಘ ಪುತ್ತೂರು ಇವರಿಂದ

# ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ.) ಮಂಗಳೂರು – ವಿವಿಧ ಸಂಘಗಳಲ್ಲಿ ವೈದಿಕ ಶಿಬಿರ



ತಾ.12.05.2024ರಂದು ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ 10 ದಿನಗಳ ವೈದಿಕ ಶಿಬಿರವನ್ನು ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳು ವಿದ್ಯುಕ್ತವಾಗಿ ದೀಪ ಬೆಳಗಿಸಿ ಉದ್ಘಾಟಿಸಿದರು. ಮಹಾಮಂಡಲದ ಸ್ಥಾಪಕ ಅಧ್ಯಕ್ಷರಾದ ಸಿ.ಎಸ್. ರಾವ್, ಅಧ್ಯಕ್ಷರಾದ ಕೆ. ಮಂಜುನಾಥ್ ಹೆಬ್ಬಾರ್, ಕೋಶಾಧಿಕಾರಿ ಉದಯ ಕುಮಾರ್ ಉಪಸ್ಥಿತರಿದ್ದರು. ಉಡುಪಿ ಸಂಘದ ಉಪಾಧ್ಯಕ್ಷ ಅರವಿಂದ್ ಕುಮಾರ್, ಜೊತೆ ಕಾರ್ಯದರ್ಶಿ ವಿನೋದ್ ಕುಮಾರ್ ಮತ್ತು ನಿರ್ದೇಶಕರು ಭಾಗವಹಿಸಿದರು. ವೈದಿಕ ಶಿಬಿರದ ಶಿಕ್ಷಕರಾದ ಪಾವಂಜೆ ಕೃಷ್ಣ ಭಟ್ ಉಪಸ್ಥಿತರಿದ್ದರು.



ತಾ.12.05.2024ರಂದು ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸಭಾ ಬ್ರಹ್ಮಾವರದಲ್ಲಿ...



ತಾ.21.05.2024ರಂದು ಸ್ಥಾನಿಕ ಸಂಘ ಕಡಬದಲ್ಲಿ...



ಬೆಳ್ತಂಗಡಿ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಬೆಳ್ತಂಗಡಿಯಲ್ಲಿ....



ಶ್ರೀ ಬಿಂದು ಮಾಧವ ಸ್ಥಾನಿಕ ಶಿವಬ್ರಾಹ್ಮಣ ಸಂಘ ಕಳಸದಲ್ಲಿ...



ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ ಮೂಡುಬಿದ್ರಿಯಲ್ಲಿ...




ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಬಂಟ್ವಾಳ ವಲಯದಲ್ಲಿ...



ಕಬ್ಬಿನಾಲೆ ಹೆಬ್ಬಾರ ಸ್ಥಾನಿಕ ಸಂಘದ ಆಶ್ರಯದಲ್ಲಿ...









SHREE SHARADA – Printed and Published by P. Prabhakara Bhandy on behalf of
Shree Stanika Brahmana Sangha. Printed at Shrinidhi Graphic Tech, D.No. 8-7A1-12, Ground Floor, Shambhavi Crystal Biz Hub, Near D.C Office, Saralabettu Ward, Herga Village, Dist : UDUPI - 576104, Karnataka. Published at : Shri Stanika Brahmana Sangha, Shri Sharada Mantapa, Sharada Nagara, Kunjibettu, Udupi - 576 102. Editor : U. Aravinda Kumar